ಸಂಪಾದಕರು: ರವಿಕುಮಾರ್ ಸಿ.ಹೆಚ್.

ಓದುಗರ ನೆಚ್ಚಿನ ಕನ್ನಡ ದಿನಪತ್ರಿಕೆ

# ಸೂರ್ಯ ಪ್ರಗತಿ

SURYAPRAGATHI Kannada Daily

ಪ್ರತಿ ಸುದ್ಧಿಯ ಧ್ವನಿ

suryapragathi2021@gmail.com Mob: 9901010109 RNI:KARKAN/2021/80805 L2/RNP-1285/TMR/2025-27

Volume: 05 ಸಂಪುಟ: 05 | Issue: 54 ಸಂಚಿಕೆ: 54 | Date: 08-03-2026 Sunday | RNI NO : KARKAN/2021/80805 | L2/RNP-1285/TMR/2025-27 | Page :4 ಪುಟ : 4 | Price: 1.00 ಬೆಲೆ: 1.00 ರೂ

## ಲೆಕ್ಕರಾಮಯ್ಯ ಅಲ್ಲ ಸಾಲರಾಮಯ್ಯ: ಸಿದ್ದರಾಮಯ್ಯ ಬಜೆಟ್‌ಗೆ ಪ್ರಹ್ಲಾದ ಜೋಶಿ ವ್ಯಂಗ್ಯ

ಸಿಎಂ ಸಿದ್ದರಾಮಯ್ಯ 2026ನೇ ಸಾಲಿನ ಬಜೆಟ್ ಮಂಡಿಸಿದ್ದು, ಈ ಸಲ ಕೂಡ 1 ಕೋಟಿ 32 ಸಾವಿರ ರೂ. ಸಾಲ ಮಾಡಲಾಗಿದೆ. ಇದರೊಂದಿಗೆ ರಾಜ್ಯದ ಸಾಲ 8 ಕೋಟಿ 24 ಸಾವಿರಕ್ಕೆ ತಲುಪಿದೆ. ಹೀಗಾಗಿ ಇದಕ್ಕೆ ವಿಪಕ್ಷ ಬಿಜೆಪಿ ನಾಯಕರು ಸಿದ್ದರಾಮಯ್ಯರದ್ದು ಸಾಲದ ಬಜೆಟ್ ಎಂದು ಕಿಡಿಕಾರಿದ್ದಾರೆ. ಇನ್ನು ಕರ್ನಾಟಕ ಬಜೆಟ್ ಬಗ್ಗೆ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ವ್ಯಂಗ್ಯವಾಡಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿದ 17ನೇ ಬಜೆಟ್ 4.48 ಲಕ್ಷ ಕೋಟಿ ರೂಪಾಯಿ ಬೃಹತ್ ಗಾತ್ರದ ಹೆಗ್ಗಳಿಕೆಗಷ್ಟೇ ಸೀಮಿತ. ಅಂತೆಯೇ ರಾಜ್ಯದ ಸಾಲ ಹೆಚ್ಚಳ ಮತ್ತು ವಿತ್ತೀಯ ಕೊರತೆಯಲ್ಲಿ ಸಹ ದಾಖಲೆ ನಿರ್ಮಿಸಿದ್ದಲ್ಲದೆ, "ವೋಟ್ ಬ್ಯಾಂಕ್" ಪ್ರೇರಿತ ಎಂಬಂತಿದೆ. ಕರ್ನಾಟಕ ಸರ್ಕಾರದ 2026–27ನೇ ಸಾಲಿನ ಈ ಬಜೆಟ್ ನಲ್ಲಿ (ಏಚಿಡಿಟಿಚಿಣಚಿಞಚಿ ಃಣಜಂಜಣ) ರಾಜ್ಯವನ್ನು ಆರ್ಥಿಕ ಪ್ರಗತಿಯತ್ತ ಕೊಂಡೊಯ್ಯುವ ಬದಲು ಆರ್ಥಿಕ ಸಂಕಷ್ಟವನ್ನು ತೆರೆದಿಟ್ಟಿದೆ. ಅಲ್ಪಸಂಖ್ಯಾತ ಸಮುದಾಯ ಸೇರಿದಂತೆ ಕೆಲವೇ ಕೆಲವು ಸಮಾಜಗಳಿಗೆ ಬಜೆಟ್ ಮೀಸಲಿಟ್ಟಂತೆ ಕಾಣುತ್ತಿದೆ ಎಂದು ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಹ್ಲಾದ ಜೋಶಿ ಕಿಡಿಕಾರಿದ್ದಾರೆ.





### ಲೆಕ್ಕರಾಮಯ್ಯ ಅಲ್ಲ ಸಾಲರಾಮಯ್ಯ

ಪ್ರಸ್ತುತ 4.48 ಲಕ್ಷ ಕೋಟಿ ದೊಡ್ಡ ಗಾತ್ರದ ಬಜೆಟ್ ಆಗಿದ್ದರೂ ಇದೊಂದು ಸ್ಪಷ್ಟ ಅರ್ಥ ನೀತಿ ಬಿಂಬಿಸದ, 'ಅರ್ಥ'ವಿಲ್ಲದ ಈ ಆಯವ್ಯಯ ಥೇಟ್ ರಾಜಕೀಯ ಭಾಷಣದಂತಿದೆಯೇ ಹೊರತು ಯಾವುದೇ ಅರ್ಥಶಾಸ್ತ್ರದ ಮಾರ್ಗದರ್ಶಿಗೆ ಒಳಪಟ್ಟಂತೆ ಕಾಣುತ್ತಿಲ್ಲ. ಪ್ರಸಕ್ತ ಬಜೆಟ್ ನಲ್ಲಿ 97,449 ಕೋಟಿ ವಿತ್ತೀಯ ಕೊರತೆ ಮತ್ತು 29,957 ಕೋಟಿ ರಾಜಸ್ವ ಸಂಗ್ರಹ ಕೊರತೆ ತೋರಿಸಿರುವ ಸಿಎಂ ಸಿದ್ದರಾಮಯ್ಯ ಅವರು ಲೆಕ್ಕರಾಮಯ್ಯ ಅಲ್ಲ, ಸಂಪದ್ಭರಿತವಾಗಿದ್ದ ಕರುನಾಡಿನ ಪಾಲಿಗೆ 1.32 ಲಕ್ಷ ಕೋಟಿ ಸಾಲದ ಹೊರೆ ಹೊರಿಸಿದ "ಸಾಲರಾಮಯ್ಯ" ಆಗಿದ್ದಾರೆಂದು ಲೇವಡಿ ಮಾಡಿದ್ದಾರೆ.

ಗ್ಯಾರೆಂಟಿ ಕೈ ಬಿಡುವ ಸೂಚನೆಯೇ? ಪ್ರಸಕ್ತ ಬಜೆಟ್ ಅಲ್ಲಿ ತಾವೇ ಘೋಷಿಸಿದ್ದ ಗ್ಯಾರೆಂಟಿ ಯೋಜನೆ "ಯುವ ನಿಧಿ"ಗೆ ಈ ಬಾರಿ ಅನುದಾನವನ್ನೇ ಮೀಸಲಿಟ್ಟಿಲ್ಲ. ಇದು ಕ್ರಮೇಣ ಒಂದೊಂದೇ ಗ್ಯಾರೆಂಟಿಗಳನ್ನು ಕೈ ಬಿಡುವ ಮುನ್ಸೂಚನೆ ನೀಡಿದಂತಿದೆ. ಯುವ ಸಮುದಾಯವನ್ನು ಸಂಪೂರ್ಣ ನಿರ್ಲಕ್ಷಿಸಿದೆ. ಕಾರಣ "ಪ್ರಜ್ಞಾವಂತ ಯುವ ಸಮುದಾಯ ತಮ್ಮ ವೋಟ್ ಬ್ಯಾಂಕ್ ಅಲ್ಲ" ಎಂಬ ಸ್ಪಷ್ಟ ಭಾವನೆ ಮೂಡಿದಂತಿದೆ ಈ ಕಾಂಗ್ರೆಸ್ ಸರ್ಕಾರಕ್ಕೆ ಎಂದು ಪ್ರಹ್ಲಾದ ಜೋಶಿ ವಿಶ್ಲೇಷಿಸಿದ್ದಾರೆ.

ರಾಜ್ಯ ಸರ್ಕಾರದ ಈ ಬಜೆಟ್ ಅಲ್ಲಿ ಶಿಕ್ಷಣ ಕ್ಷೇತ್ರ ಮತ್ತು ಅವೈಜ್ಞಾನಿಕ ಗ್ಯಾರೆಂಟಿಗಳನ್ನು ಬಿಟ್ಟರೆ ಬೇರೆ ಯಾವುದೇ ವಲಯಕ್ಕೆ ಅಂಥಾ ದೊಡ್ಡ ಕೊಡುಗೆ ಏನಿಲ್ಲ. ಅದರಲ್ಲೂ ಪ್ರಮುಖವಾಗಿ ಆರೋಗ್ಯ ಕ್ಷೇತ್ರ ಮತ್ತು ಕೃಷಿ ವಲಯವನ್ನು ಸಂಪೂರ್ಣ ನಿರ್ಲಕ್ಷಿಸಿದೆ. ಸಮಾಜ ಕಲ್ಯಾಣ, ಮೂಲಸೌಕರ್ಯ ಹಾಗೂ ಅಭಿವೃದ್ಧಿಯನ್ನು ಕಡೆಗಣಿಸಿದೆ ಎಂದು ಹೇಳಿದ್ದಾರೆ.

ಸಿಎಂ ದೂರದೃಷ್ಟಿಯ ಈ ಬಜೆಟ್ ಅಲ್ಲಿ ಒಟ್ಟಾರೆ ಇಂದಿರಾ ಕ್ಯಾಂಟೀನ್, ಬೆಂಗಳೂರು, ಮೈಸೂರು, ದಾವಣಗೆರೆ, ಮತ್ತು ಕಲ್ಬುರ್ಗಿ ಅಷ್ಟೇ ಗೋಚರಿಸಿದಂತಿದೆ. ಉತ್ತರ ಕರ್ನಾಟಕ, ಕಲ್ಯಾಣ ಕರ್ನಾಟಕ ಸೇರಿದಂತೆ ಬೇರೆ ಬೇರೆ ಪ್ರಾಂತ್ಯಗಳು, ಜಿಲ್ಲೆಗಳು ಹಿಂದುಳಿದಿವೆ. ಅಭಿವೃದ್ಧಿ ಶೂನ್ಯವಾಗಿದೆ ಎಂದಿದ್ದಾರೆ.

ದಿಕ್ಕು ದೆಸೆ ಇಲ್ಲದ ಮುಂಗಡ ಪತ್ರ: ರಾಜ್ಯದ ನೀರಾವರಿ ಯೋಜನೆಗಳಿಗೆ ಯಾವುದೇ ಹಣಕಾಸಿನ ಪ್ರಸ್ತಾಪವಿಲ್ಲ. ಕೇಂದ್ರದ ಅನುಮತಿ ನೆಪ ಹೇಳಿ ತಪ್ಪಿಸಿಕೊಳ್ಳುವ ವ್ಯರ್ಥ ಪ್ರಯತ್ನವಷ್ಟೇ ಇವರ ಕಸರತ್ತಾಗಿದೆ. ಯಾವುದೇ ದಿಕ್ಕು ದೆಸೆ ಇಲ್ಲದ ಈ ಒಂದು ದಾಖಲೆಯ ಮುಂಗಡ ಪತ್ರದಿಂದ ಜನಕಲ್ಯಾಣವೂ ಇಲ್ಲ ಆರ್ಥಿಕ ಪ್ರಗತಿಯೂ ಇಲ್ಲ. ಒಟ್ಟಾರೆ ಇದೊಂದು ಕೇವಲ ಸಾಲದ ಹೊರೆ ಮತ್ತು ವೋಟ್ ಬ್ಯಾಂಕ್ ಪ್ರೇರಿತ ಬಜೆಟ್ ಎಂದು ಹೇಳಿದ್ದಾರೆ.

## ಕೋಡಿಹಳ್ಳಮ್ಮ ಅಗ್ನಿಗೊಂಡ ಅವಘಡ

### ಆಸ್ಪತ್ರೆಗೆ ಗೃಹ ಸಚಿವರ ವಿಶೇಷ ಕರ್ತವ್ಯಾಧಿಕಾರಿ

## ಡಾ.ಕೆ.ನಾಗಣ್ಣ ಭೇಟಿ, ಸಾಂತ್ವನ



ಶಿರಾ ತಾಲೂಕಿನ ಭಕ್ತರು ಹಿರಿಯೂರು ತಾಲ್ಲೂಕಿನ ಕೋಡಿಹಳಮ್ಮ ಜಾತ್ರೆಯಲ್ಲಿ ಆಗ್ನಿಗೊಂಡ ಹಾಯುವಾಗ ಅದರಲ್ಲಿ ಬಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಗಾಯಗೊಂಡು ಶ್ರೀದೇವಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಭಕ್ತರನ್ನು ಗೃಹ ಸಚಿವರ ವಿಶೇಷ ಕರ್ತವ್ಯಾಧಿಕಾರಿ ಡಾ.ಕೆ ನಾಗಣ್ಣ ಭೇಟಿ ಮಾಡಿ ಅವರ ಆರೋಗ್ಯ ವಿಚಾರಿಸಿದರು.ಈ ಸಂದರ್ಭದಲ್ಲಿ ಗಾಯಗೊಂಡಿರುವ ಭಕ್ತರಿಗೆ ಧೈರ್ಯ ತುಂಬಿ, ಅವರ ಆರೋಗ್ಯದ ಬಗ್ಗೆ ವೈದ್ಯರಿಂದ ಮಾಹಿತಿ ಪಡೆದುಕೊಳ್ಳಲಾಯಿತು. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳಿಗೆ ಹಾಗೂ ಅವರ ಕುಟುಂಬಸ್ಥರಿಗೆ ಮಾನವೀಯತೆ ಮತ್ತು ಸೇವಾಭಾವದ ಸಂಕೇತವಾಗಿ ಬ್ರೆಡ್ ಮತ್ತು ಹಣ್ಣುಗಳನ್ನು ವಿತರಿಸಲಾಯಿತು.

ಗಾಯಗೊಂಡವರು ಶೀಘ್ರ ಗುಣಮುಖರಾಗಿ ತಮ್ಮ ಕುಟುಂಬಗಳೊಂದಿಗೆ ಸುಖ ಶಾಂತಿಯಿಂದ ಜೀವನ ನಡೆಸಲಿ ಎಂದು ದೇವರಲ್ಲಿ ಪ್ರಾರ್ಥಿಸಲಾಯಿತು.

## ಹೆಗ್ಡೆರೆ–ಕುಂಕುಮನಹಳ್ಳಿ ರಸ್ತೆಯ ಸಿಸಿ ರಸ್ತೆ ಹಾಗೂ ಸೇತುವೆ ನಿರ್ಮಾಣ ಕಾಮಗಾರಿ:

### ವಾಹನಗಳ ಸಂಚಾರ ನಿಷೇಧ : ಪರ್ಯಾಯ ಮಾರ್ಗ ಬಳಸಲು ಸೂಚನೆ

ಹೆಗ್ಗೆರೆ–ಕುಂಕುಮನಹಳ್ಳಿ ರಸ್ತೆಯ ಸಿ.ಸಿ ರಸ್ತೆ ಹಾಗೂ ಸೇತುವೆ ನಿರ್ಮಾಣ ಮಾಡಿ ಅಭಿವೃದ್ಧಿ ಪಡಿಸುವ ಕಾಮಗಾರಿಯು ಪ್ರಗತಿಯಲ್ಲಿದ್ದು, ಸದರಿ ಕಾಮಗಾರಿಯನ್ನು ನಿರ್ವಹಿಸಲು ವಾಹನ ಸಂಚಾರವು ಅಡಚಣೆಯಾಗುತ್ತಿದ್ದು, 90 ದಿನಗಳವರೆಗೆ ವಾಹನ ಸಂಚಾರ ಸ್ಥಗಿತಗೊಳಿಸಲು ಮೇಲೆ ಓದಲಾದ ಕ್ರ.ಸಂ.1 ರ ಪತ್ರದಲ್ಲಿ ಕೋರಿದ್ದು, ಈ ಸಂಬಂಧ ಕ್ರ.ಸಂ.2 ರ ಪತ್ರದಲ್ಲಿ ಸಿ.ಪಿ.ಸಿ. ತುಮಕೂರು ಗ್ರಾಮಾಂತರ ವೃತ್ತ ರವರು ದಿನಾಂಕ: 20–02–2026 ರಂದು ಸ್ಥಳಕ್ಕೆ ಖುದ್ದು ಭೇಟಿ ನೀಡಿ ಪರಿಶೀಲಿಸಿದ್ದು, ಹೆಗ್ಗೆರೆ–ಕುಂಕುಮನಹಳ್ಳಿ ರಸ್ತೆಯ ಸಿ.ಸಿ ರಸ್ತೆ, ಹಾಗೂ ಸೇತುವೆ ನಿರ್ಮಾಣದ ಕಾಮಗಾರಿ ಪ್ರಗತಿಯಲ್ಲಿದ್ದು, ಈ ರಸ್ತೆಯನ್ನು ನಿರ್ಬಂದಿಸಿ ಪರ್ಯಾಯ ಮಾರ್ಗವಾಗಿ ಸೂಚಿಸಿರುವ ರಸ್ತೆಗಳಾದ 1) ರಾಷ್ಟ್ರೀಯ ಹೆದ್ದಾರಿ–206 ತುಮಕೂರು ಮಲ್ಲಸಂದ್ರ ಕಡೆಯಿಂದ ಮಲ್ಲಸಂದ್ರ




ರೈಲ್ವೇಗೇಟ್–ಹಾಲನೂರು ಮಲ್ಲಸಂದ್ರ ಮಾರ್ಗ ಕುಂಕುಮನಹಳ್ಳಿ ಸಂಪರ್ಕಿಸುವ ರಸ್ತೆ 2 ) ತುಮಕೂರು ರಿಂಗ್ ರಸ್ತೆ ಕಡೆಯಿಂದ ಗಂಗಸಂದ್ರ, ಗಂಗಯ್ಯನಪಾಳ್ಯ–ಲಕ್ಷ್ಮಣಸಂದ್ರ ಮಾರ್ಗ, ಕುಂಕುಮನಹಳ್ಳಿ ಸಂಪರ್ಕಿಸುವ ರಸ್ತೆಗಳಲ್ಲಿ ತಾತ್ಕಾಲಿಕವಾಗಿ ವಾಹನ ಸಂಚಾರ ವ್ಯವಸ್ಥೆ ಮಾಡಲು ಯಾವುದೇ ಅಭ್ಯಂತರ ಇರುವುದಿಲ್ಲವೆಂದು ಹಾಗೂ ಮೇಲ್ಕಂಡಂತೆ ಮಾರ್ಗ ಬದಲಾವಣೆಗೆ ಅಗತ್ಯ ಸಿಬ್ಬಂದಿಗಳನ್ನು ನಿಯೋಜಿಸಿಕೊಂಡು ಪೊಲೀಸ್ ಬಂದೋಬಸ್ತ್ ಮಾಡಲಾಗುವುದೆಂದು ತಿಳಿಸಲಾಗಿರುತ್ತದೆ.

ಆದ್ದರಿಂದ, ಮೇಲೆ ವಿವರಿಸಿರುವಂತೆ ದಿನಾಂಕ: 01.03.2026 ರಿಂದ 90 ದಿನಗಳವರೆಗೆ ಅಂದರೆ ದಿನಾಂಕ: 30.05.2026 ರವರೆಗೆ ಹೆಗ್ಗೆರೆ–ಕುಂಕುಮನಹಳ್ಳಿ ರಸ್ತೆಯ ಸಿ.ಸಿ ರಸ್ತೆ ಹಾಗೂ ಸೇತುವೆ ನಿರ್ಮಾಣ ಕಾಮಗಾರಿಯ ಹಿನ್ನಲೆಯಲ್ಲಿ ಕಾನೂನು ಸುವ್ಯವಸ್ಥೆ ಹಾಗೂ ಸಾರ್ವಜನಿಕರ ಸುಗಮ ಸಂಚಾರಕ್ಕಾಗಿ ಹೆಗ್ಗೆರೆ–ಕುಂಕುಮನಹಳ್ಳಿ ರಸ್ತೆಯ ವಾಹನ ಸಂಚಾರವನ್ನು ನಿರ್ಬಂಧಿಸಿ, ವಾಹನಗಳನ್ನು ಬದಲಿ ಮಾರ್ಗದಲ್ಲಿ ಸಂಚರಿಸಲು ಆದೇಶ ನೀಡುವುದು ಸೂಕ್ತವೆಂದು ಮನಗಂಡು ಈ ಕೆಳಕಾಣಿಸಿದಂತೆ ಆದೇಶವನ್ನು ಹೊರಡಿಸಲಾಗಿದೆ.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ

## ಪೌರ ಕಾರ್ಮಿಕನ ಮನೆ ಬೆಂಕಿ: ಸಮರ್ಪಕ ಪರಿಹಾರಕ್ಕೆ ಸಿಪಿಐ(ಎಂ) ಒತ್ತಾಯ

ತುಮಕೂರು ಮಹಾನಗರದಲ್ಲಿ ವಾಸವಾಗಿರುವ ಪೌರಕಾರ್ಮಿಕರಾದ ಅಯ್ಯಪ್ಪ ಅವರ ಮನೆ ಸಂಭವಿಸಿದ ಅಗ್ನಿ ಅವಘಡದಲ್ಲಿ ಸಂಪೂರ್ಣವಾಗಿ ಬೆಂಕಿಗೆ ಆಹುತಿಯಾಗಿದೆ. ಮನೆಯಲ್ಲಿದ್ದ ಎಲ್ಲಾ ವಸ್ತುಗಳು ಸುಟ್ಟು ಕರಕಲಾಗಿದ್ದು, ಕುಟುಂಬ ತೀವ್ರ ಸಂಕಷ್ಟಕ್ಕೆ ಸಿಲುಕಿದೆ. ಜೀವನೋಪಾಯಕ್ಕಾಗಿ ದುಡಿಯುತ್ತಿರುವ ಪೌರಕಾರ್ಮಿಕ ಕುಟುಂಬಕ್ಕೆ ಈ ಘಟನೆ ದೊಡ್ಡ ಆಘಾತವಾಗಿದೆ.

ಈ ದುರ್ಘಟನೆಯ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ಹಾಗೂ ತುಮಕೂರು ಮಹಾನಗರ ಪಾಲಿಕೆ ತಕ್ಷಣ ಗಮನಹರಿಸಿ ಮನೆ ಹಾಗೂ ಮನೆಯಲ್ಲಿದ್ದ ವಸ್ತುಗಳ ನಷ್ಟವನ್ನು ಪರಿಗಣಿಸಿ ನ್ಯಾಯೋಚಿತ ಮತ್ತು ಸಮರ್ಪಕ ಪರಿಹಾರವನ್ನು ನೀಡಬೇಕು ಎಂದು ಸಿಪಿಎಂ ತುಮಕೂರು ನಗರ ಸಮಿತಿ ತೀವ್ರವಾಗಿ ಒತ್ತಾಯಿಸುತ್ತದೆ.

ಅಧಿಕಾರಿಗಳು ಘಟನೆ ಸ್ಥಳಕ್ಕೆ ಭೇಟಿ ನೀಡಿ ಮಹಜರ್ ನಡೆಸಿರುವುದು ಸರಿಯೇ. ಆದರೆ



ಕೇವಲ ಮಹಜರ್ ನಡೆಸುವುದರಿಂದ ಸಮಸ್ಯೆ ಪರಿಹಾರವಾಗುವುದಿಲ್ಲ. ಬೆಂಕಿಯಿಂದ ಎಲ್ಲವನ್ನೂ ಕಳೆದುಕೊಂಡಿರುವ ಕುಟುಂಬಕ್ಕೆ ತಕ್ಷಣ ಆರ್ಥಿಕ ನೆರವು, ತಾತ್ಕಾಲಿಕ ವಸತಿ ವ್ಯವಸ್ಥೆ ಹಾಗೂ ಅಗತ್ಯ ಜೀವನೋಪಾಯ ಸಾಮಗ್ರಿಗಳನ್ನು ಒದಗಿಸಲು ಜಿಲ್ಲಾಡಳಿತ ಮತ್ತು ಮಹಾನಗರ ಪಾಲಿಕೆ ವಿಳಂಬವಿಲ್ಲದೆ ಕ್ರಮ ಕೈಗೊಳ್ಳಬೇಕು.

ಸಿಪಿಐ(ಎಂ) ನೀಯೋಗ ಸ್ಥಳಕ್ಕೆ ತೆರಳಿ ಪರೀಶಿಲಿಸಿ ಒತ್ತಾಯಿಸಲಾಯಿತು.ಈ ನೀಯೋಗದಲ್ಲಿ ಪಕ್ಷದ ರಾಜ್ಯ ಕಾರ್ಯದರ್ಶಿ ಸೈಯದ್ ಮುಜೀಬ್, ಜಿಲ್ಲಾ ಕಾರ್ಯದರ್ಶಿ ಎನ್.ಕೆ.ಸುಬ್ರಮಣ್ಯ ನಗರ ಕಾರ್ಯದರ್ಶಿ ಎ.ಲೋಕೇಶ್ ಉಪಸ್ಥಿತರಿದ್ದರು.

## ಜಿಲ್ಲೆಯಲ್ಲಿ ಆಟೋ ಡೀಲರ್‌ಗಳ ಅಟ್ಟಹಾಸ ಮೀತಿ ಮೀರಿದೆ: 6000 ಸಾವಿರ ಆಟೋಗಳಿಗೆ ಪರ್ಮಿಟ್,10 ಸಾವಿರ ಆಟೋಗಳ ಸಂಚಾರ

ತುಮಕೂರು– ಅಟೋ ಚಾಲಕರು ಮತ್ತು ಮಾಲೀಕರಿಗೆ ಡಿಸ್‌ಪ್ಲೇ ಕಾರ್ಡು ನೀಡುವುದು, ಆನ್‌ಲೈನ್ ಟ್ಯಾಕ್ಸಿಗಳಿಗೆ ಅವಕಾಶ ನೀಡಬಾರದು, ಎಲ್ಲಾ ಚಾಲಕರಿಗೆ ಯೂನಿಫಾರಂ ಕಡ್ಡಾಯ ಸೇರಿದಂತೆ ಹಲವು ಬೇಡಿಕೆಗಳನ್ನು ಒಳಗೊಂಡ ಮನವಿಯನ್ನು ತುಮಕೂರು ಜಿಲ್ಲಾ ಅಟೋ ಚಾಲಕರು ಮತ್ತು ಮಾಲೀಕರ ಒಕ್ಕೂಟದ ವತಿಯಿಂದ ಸಲ್ಲಿಸಲಾಗುವುದು ಎಂದು ಒಕ್ಕೂಟದ ಮುಖಂಡರಾದ ರುದ್ರಾರಾಧ್ಯ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಟೋ ಡಿಸ್‌ಪ್ಲೇ ಕಾರ್ಡುಗಳನ್ನು 2010 ರಿಂದ 2016 ರವರಗೆ ಜಿಲ್ಲಾ ಸಾರಿಗೆ ಪ್ರಾಧಿಕಾರದಿಂದ ನೀಡಲಾಗುತ್ತಿತ್ತು. ಆದರೆ 2016 ರ ನಂತರ ನಿಲ್ಲಿಸಿದ ಕಾರಣ, ತುಮಕೂರು ನಗರದಲ್ಲಿ 6000 ಸಾವಿರ ಆಟೋಗಳಿಗೆ ಪರ್ಮಿಟ್ ನೀಡಿದರೆ, 10 ಸಾವಿರಕ್ಕೂ ಹೆಚ್ಚು ಆಟೋಗಳು ಸಂಚರಿಸುತ್ತಿವೆ. ಹೊರಗಿನಿಂದ ಬರುವ ಆಟೋ ಚಾಲಕರು, ಮಾಲೀಕರು ಡ್ರಗ್ಸ್, ಮದ್ಯಪಾನದಂತಹ ಚಟಗಳಿಗೆ ದಾಸರಾಗಿ, ನಿಜವಾಗಿಯೂ ಆಟೋ ದುಡಿಮೆಯನ್ನೇ ನಂಬಿ ಬದುಕುತ್ತಿರುವ ಆಟೋ ಚಾಲಕರು ಮತ್ತು ಮಾಲೀಕರಿಗೆ ಕೆಟ್ಟ ಹೆಸರು ತರುತ್ತಿದ್ದಾರೆ. ಇದರ ಬಗ್ಗೆ ಗೊತ್ತಿದ್ದರೂ ಆರ್.ಟಿ.ಓ. ಅಧಿಕಾರಿಗಳು ಕಣ್ಣು ಮುಚ್ಚಿ ಕುಳಿತಿದ್ದಾರೆ ಎಂದು ಆರೋಪಿಸಿದರು.




ಒಕ್ಕೂಟದ ಮುಖಂಡರಾದ ಫೈರೋಜ್ ಮಾತನಾಡಿ, ತುಮಕೂರು ಜಿಲ್ಲೆಯಲ್ಲಿ ಆಟೋ ಡೀಲರ್‌ಗಳ ಅಟ್ಟಹಾಸ ಮೀತಿ ಮೀರಿದೆ. ಆರ್.ಬಿ.ಐ. ನಿಯಮದ ಪ್ರಕಾರ ಲಕ್ಷ ರೂ.ಗೆ ಡೀಲರ್ 1.60 ರೂ. ಮಾತ್ರ ಬಡ್ಡಿ ಪಡೆಯಬೇಕು. ಆದರೆ ಡೀಲರ್‌ಗಳು ಎರಡು ರೂ. ಪಡೆಯುತ್ತಿದ್ದಾರೆ.ಆಟೋ ಡಾಕ್ಯುಮೆಂಟ್ ಇಟ್ಟುಕೊಂಡು ಹೆಚ್ಚಿನ ಬಡ್ಡಿಗೆ ಸಾಲ ನೀಡುವವರ ಸಂಖ್ಯೆ ಹೆಚ್ಚಿದೆ. ಇವರ ಕಾಟ ತಾಳಲಾರದೆ ಅನೇಕ ಆಟೋ ಚಾಲಕರು ಆತ್ಮಹತ್ಯೆ ಗೆ ಶರಣಾಗಿದ್ದಾರೆ. ಇವರ ಅಟ್ಟಹಾಸಕ್ಕೆ ಕಡಿವಾಣ ಹಾಕಲು ಲೋಕಾಯುಕ್ತರು ಆಟೋ ಡೀಲರ್ ಗಳ ಕಚೇರಿಯ ಮೇಲೆ ದಾಳಿ ನಡೆಸುವಂತೆ ಒತ್ತಾಯಿಸಿದರು.

ಆಟೋ ಪರ್ಮೀಟ್ ನೀಡುವಲ್ಲಿ ಆರ್.ಟಿ.ಓ ಅಧಿಕಾರಿಗಳು ಮತ್ತು ಆಟೋ ಡೀಲರ್ ಗಳ ನಡುವೆ ಒಳ ಒಪ್ಪಂದ ಏರ್ಪಟ್ಟಿದೆ.ಪರ್ಮೀಟ್ ನೀಡುವುದನ್ನೇ ದಂಧೆ ಮಾಡಿಕೊಂಡು ಅನಗತ್ಯವಾಗಿ ಆಟೋಗಳ ಸಂಖ್ಯೆ ಹೆಚ್ಚಳ ಮಾಡಿ, ಇರುವ ಆಟೋಗಳಿಗೆ ಬಾಡಿಗೆ ಇಲ್ಲದಂತೆ ಮಾಡುತ್ತಿದ್ದಾರೆ.ಜಿಲ್ಲಾಡಳಿತ ಇದಕ್ಕೆ ಕಡಿವಾಣ ಹಾಕಬೇಕೆಂದು ಫೈರೋಜ್ ಆಗ್ರಹಿಸಿದರು.

ತುಮಕೂರು ಜಿಲ್ಲಾ ಆಟೋ ಚಾಲಕರು ಮತ್ತು ಮಾಲೀಕರ ಒಕ್ಕೂಟದ ಮೋಹನ್ ಕುಮಾರ್ ಮಾತನಾಡಿ, ಆನ್ ಲೈನ್ ಆಟೋಗಳಿಂದ ನಮ್ಮ ಆಟೋ ಚಾಲಕರಿಗೆ ತೀವ್ರ ತೊಂದರೆ ಆಗಿದೆ. 15 ಕಿಮೀ ಸುತ್ತಳತೆ ಇರುವ ತುಮಕೂರು ನಗರಕ್ಕೆ ಬೈಕ್ ಟ್ಯಾಕ್ಸಿ, ಓಲೋ, ನಮ್ಮ ಯಾತ್ರಿ ಅಂತಹ ಅನ್ ಲೈನ್ ಸೇವೆಗಳ ಅಗತ್ತವಿಲ್ಲ. ವೈಟ್ ಬೋರ್ಡ್ ನವರು ಬೈಕ್ ಟ್ಯಾಕ್ಸಿ ಹೆಸರಿನಲ್ಲಿ ಬಾಡಿಗೆ ಓಡಿಸಿ ನಮ್ಮ ಬಾಯಿಗೆ ಮಣ್ಣು ಹಾಕುತ್ತಿದ್ದಾರೆ.ಜಿಲ್ಲಾಡಳಿತ ಯಾವ ಕಾರಣಕ್ಕೂ ಬೈಕ್ ಟ್ಯಾಕ್ಸಿ,ಓಲೋ ದಂತಹ ಆನ್ ಲೈನ್ ಸೇವೆಗಳಿಗೆ ಅವಕಾಶ ಕಲ್ಪಿಸಬಾರದು ಎಂದು ಒತ್ತಾಯಿಸಿದರು

ಮತ್ತೊಬ್ಬ ಮುಖಂಡರಾದ ರುದ್ದೇಶ್ ಮಾತನಾಡಿ, ತುಮಕೂರು ನಗರ ಸ್ಮಾರ್ಟ್ ಸಿಟಿಯಾದರು ಆಟೋಗಳಿಗೆ ಮೀಟರ್ ಕಡ್ಡಾಯಗೊಳಿಸಿಲ್ಲ. ಇದರಿಂದ ಆಟೋ ಚಾಲಕರಿಗೆ ತೀವ್ರ ತೊಂದರೆಯಾಗಿದೆ.ಪ್ರಯಾಣಿಕರು ಹೇಳಿದ ಹಣಕ್ಕೆ ಆಟೋ ಓಡಿಸಬೇಕಿದೆ. ಚೌಕಾಶಿ ಹೆಚ್ಚಾಗಿ ಜಗಳಕ್ಕೆ ಕಾರಣವಾಗುತ್ತಿದೆ.ಹಾಗಾಗಿ ಆಟೋಗಳಿಗೆ ಮೀಟರ್ ಕಡ್ಡಾಯವಾಗಿ ಮೀಟರ್ ಅಳವಡಿಸುವಂತೆ ಒತ್ತಾಯಿಸುತ್ತವೆ. ಮೇಲಿನ ಎಲ್ಲಾ ಬೇಡಿಕೆಗಳನ್ನು ಈಡೇರಿಸುವಂತೆ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಿದ್ದೇವೆ. ಜಿಲ್ಲಾಡಳಿತ ಸ್ಪಂದಿಸಿ ನಮ್ಮ ಬೇಡಿಕೆಗಳನ್ನು ಈಡೇರಿಸದಿದ್ದರೆ ಒಕ್ಕೂಟದವತಿಯಿಂದ ಟೌನ್ ಹಾಲ್ ಮುಂಭಾಗದಲ್ಲಿ ಪತ್ರಿಭಟನೆ ಹಮ್ಮಿಕೊಳ್ಳಲಾಗುವುದು ಎಂದರು

ಸುದ್ದಿಗೋಷ್ಠಿಯಲ್ಲಿ ತುಮಕೂರು ಜಿಲ್ಲಾ ಆಟೋ ಚಾಲಕರು ಮತ್ತು ಮಾಲೀಕರ ಒಕ್ಕೂಟದ ಪದಾಧಿಕಾರಿಗಳಾದ ರುದ್ರೇಶ್.ಎಂ.ಕೆ, ರುದ್ರಾರಾಧ್ಯ, ಮೋಹನ್ ಕುಮಾರ್, ಫೈರೋಜ್, ರವಿಕಿರಣ್, ಅನಿಲ್ ಕುಮಾರ್, ಶಾಂತಕುಮಾರ್, ರವಿಪ್ರಕಾಶ್, ರಂಗಪ್ಪ, ಭದ್ರೇಶ್, ತಿಪ್ಪೇಸ್ವಾಮಿ, ನಾಗಣ್ಣ ಮತ್ತಿತರರು ಪಾಲ್ಗೊಂಡಿದ್ದರು

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ

## ಗಾಂಜಾ ಸೊಪ್ಪು ಮಾರಾಟ ಮಾಡುತ್ತಿದ್ದ ಆಸಾಮಿಗೆ 3 ವರ್ಷ ಕಠಿಣ ಕಾರಾಗೃಹ ವಾಸ

ತುಮಕೂರು :ದಿನಾಂಕ:24-02-2020 ರಂದು ಗುಬ್ಬಿ ತಾಲ್ಲೋಕ್, ಕೊಂಡ್ಲಿ ಕ್ರಾಸ್ ಚಿಕ್ಕರಾಂಪುರ ರಸ್ತೆಯಲ್ಲಿ ಓಬಳಯ್ಯ ಬಿನ್ ಮಲ್ಲಯ್ಯ, 45 ವರ್ಷ, ವಾಸ ಗುಡ್ಡದ ಓಬಳಾಪುರ, ನಿಟ್ಟೂರು ಹೋಬಳಿ, ಗುಬ್ಬಿ ತಾಲ್ಲೋಕ್, ತುಮಕೂರು ಜಿಲ್ಲೆ ಈತನು ತನ್ನ ವಶದಲ್ಲಿ ಮಾದಕ ವಸ್ತು ಗಾಂಜಾವನ್ನು ಹೊಂದಿರುವ ಬಗ್ಗೆ ಆಯೂಬ್ ಜಾನ್ ಹೆಚ್.ಸಿ. 379 ರವರು ದೂರು ನೀಡಿ ಮೊ.ನಂ 34/2020 ಕಲಂ 20(ಬಿ) NDPS ACT ಅಡಿಯಲ್ಲಿ ಪ್ರಕರಣ ದಾಖಲಿಸಿದ್ದು ಎಂ.ವಿ. ಶೇಷಾದ್ರಿ ಪೊಲೀಸ್ ಇನ್ಸ್‌ಪೆಕ್ಟರ್ ರವರು ಪ್ರಕರಣ ದಾಖಲಿಸಿಕೊಂಡು ಆರೋಪಿ ಓಬಳಯ್ಯ ಬಿನ್ ಮಲ್ಲಯ್ಯ, ರವರ ವಶದಿಂದ 8 ಕೆಜಿ 730ಗ್ರಾಂ ತೂಕದ ಕಡ್ಡಿ ಬೀಜ ಮಿಶ್ರಿತ ಒಣಗಿದ ಗಾಂಜಾವನ್ನು ಅಮಾನತ್ತು ಪಡಿಸಿಕೊಂಡು ಆರೋಪಿಯು ಹಣಕ್ಕಾಗಿ ಅಕ್ರಮವಾಗಿ ಸಾರ್ವಜನಿಕರಿಗೆ ಗಾಂಜಾ ಮಾರಾಟ ಮಾಡಿರುವುದು ತನಿಖೆಯಿಂದ ದೃಢಪಟ್ಟ ಮೇರೆಗೆ ತನಿಖಾಧಿಕಾರಿಗಳಾದ ಎಂ.ವಿ.ಶೇಷಾದ್ರಿ, ಪೊಲೀಸ್ ಇನ್ಸ್‌ಪೆಕ್ಟರ್ ರವರು ತನಿಖೆ ಪೂರೈಸಿ ಇಬ್ಬರು ಆರೋಪಿಗಳ ವಿರುದ್ಧ ಕಲಂ 20(ಬಿ) NDPS ACT ಅಡಿಯಲ್ಲಿ ನ್ಯಾಯಾಲಯಕ್ಕೆ ದೋಷಾರೋಪಣ ಪತ್ರ ಸಲ್ಲಿಸಿಕೊಂಡಿರುತ್ತಾರೆ.

ಪ್ರಕರಣವು ಪ್ರಧಾನ ಜಿಲ್ಲಾ & ಸತ್ರ ನ್ಯಾಯಾಲಯದಲ್ಲಿ SPL C 89/2020 ರಲ್ಲಿ ವಿಚಾರಣೆ ನಡೆದು ದಿನಾಂಕ:04-03-2026 ರಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಮಾನ್ಯ ನ್ಯಾಯಾಧೀಶರಾದ ಶ್ರೀಯುತ ಬಿ.ಜಯಂತ್ ಕುಮಾರ್ ರವರು ಆರೋಪಿಯಾದ ಓಬಳಯ್ಯ ಬಿನ್ ಮಲ್ಲಯ್ಯ, 45 ವರ್ಷ, ವಾಸ ಗುಡ್ಡದ ಓಬಳಾಪುರ, ನಿಟ್ಟೂರು ಹೋಬಳಿ, ಗುಬ್ಬಿ ತಾಲ್ಲೋಕ್, ತುಮಕೂರು ಜಿಲ್ಲೆ ಈತನಿಗೆ 3 ವರ್ಷ ಕಠಿಣ ಕಾರಾಗೃಹ ವಾಸ ಹಾಗೂ 20,000/-ರೂ ದಂಡ, ದಂಡ ಕಟ್ಟಲು ತಪ್ಪಿದ್ದಲ್ಲಿ 4 ತಿಂಗಳ ಕಠಿಣ ಕಾರಾಗೃಹ ವಾಸ ಅನುಭವಿಸುವಂತೆ ಶಿಕ್ಷೆ ವಿಧಿಸಿ ತೀರ್ಪು ನೀಡಿರುತ್ತಾರೆ.

ಮೇಲ್ಕಂಡ ಪ್ರಕರಣದಲ್ಲಿ ಸರ್ಕಾರದ ಪರವಾಗಿ ಗೌರವಾನ್ವಿತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಸರ್ಕಾರಿ ಅಭಿಯೋಜಕರಾದ ಶ್ರೀಮತಿ ಟಿ.ಆರ್. ಅರುಣ ರವರು ಸರ್ಕಾರದ ಪರವಾಗಿ ವಾದವನ್ನು ಮಂಡಿಸಿದ್ದು ಸೈಬರ್ ಕ್ರೈಂ ಪೊಲೀಸ್ ಠಾಣೆಯ ನ್ಯಾಯಾಲಯದ ಕರ್ತವ್ಯದ ಸಿಬ್ಬಂದಿಯಾದ ರೇಷ್ಮಾ ರವರು ಅಭಿಯೋಜನಾ ಸಾಕ್ಷಿಗಳ ವಿಚಾರಣೆ ಸಮಯದಲ್ಲಿ ಹಾಜರಿದ್ದು ಸಹಕರಿಸಿರುತ್ತಾರೆ.

## ಮಕ್ಕಳ ಶೈಕ್ಷಣಿಕ ಪ್ರಗತಿಗೆ ಶಿಕ್ಷಕರ ಜೊತೆಗೆ ಪೋಷಕರ ಜವಾಬ್ದಾರಿಯೂ ಬಹುಮುಖ್ಯ

ಮಧುಗಿರಿ: ಮಕ್ಕಳ ಶೈಕ್ಷಣಿಕ ಪ್ರಗತಿಯ ಬಗ್ಗೆ ಶಿಕ್ಷಕರೊಂದಿಗೆ ಪೋಷಕರು ಮುಕ್ತವಾಗಿ ಚರ್ಚಿಸಿ ಮಕ್ಕಳ ಸರ್ವಾಂಗೀಣ ಬೆಳವಣಿಗೆಗೆ ಕೈಜೋಡಿಸಬೇಕು ಎಂದು ಇ.ಸಿ.ಓ. ಕಾಪುರಾಧಾಕೃಷ್ಣ ತಿಳಿಸಿದರು.

ತಾಲೂಕಿನ ದೊಡ್ಡೇರಿ ಹೋಬಳಿ ದಬ್ಬೇಘಟ್ಟ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಲ್ಲಿ ಹಮ್ಮಿಕೊಂಡಿದ್ದ 2025-26 ನೇ ಸಾಲಿನ ಪೋಷಕರು ಮತ್ತು ಶಿಕ್ಷಕರ 3ನೇ ಮಹಾಸಭೆ ಮತ್ತು ದಾಖಲಾತಿ ಆಂದೋಲನ ಹಾಗೂ ಮಾತೃವಂದನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡುತ್ತಾ ಪೋಷಕರು ಮಕ್ಕಳನ್ನು ಶಾಲೆಗೆ ಕಳಿಸುವುದು ಮಾತ್ರ ಜವಾಬ್ದಾರಿಯಲ್ಲ, ವಿದ್ಯೆಗೆ ಪೂರಕವಾದ ವಾತಾವರಣವನ್ನು ಮನೆಯಲ್ಲಿಯೂ ಕಲ್ಪಿಸಬೇಕು. ಶಾಲೆಗೆ ಬಂದು ಶಿಕ್ಷಕರೊಂದಿಗೆ ಮುಕ್ತವಾಗಿ ಚರ್ಚಿಸಬೇಕು. ಶಿಕ್ಷಕರ ಜೊತೆಗೆ ಪೋಷಕರ ಜವಾಬ್ದಾರಿಯು ಮಕ್ಕಳ ವಿದ್ಯಾಭ್ಯಾಸದ ಪ್ರಗತಿಗೆ ಮಹತ್ವದ್ದಾಗಿದೆ. ಮುಂದಿನ ದಿನಗಳಲ್ಲಿ ಸರ್ಕಾರಿ ಶಾಲೆಗಳಲ್ಲಿ ಹೆಚ್ಚಿನ ದಾಖಲಾತಿಗಳು



ನಡೆಯಲಿ ಎಂದು ತಿಳಿಸಿದರು.

ಮುಖ್ಯ ಶಿಕ್ಷಕ ಗಂಗಾಧರಯ್ಯ ಮಾತನಾಡಿ ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣದ ಜೊತೆ ಜೀವನದ ಮೌಲ್ಯಗಳನ್ನು ಕಲಿಸಲಾಗುತ್ತದೆ. ಸರ್ಕಾರಿ ಶಾಲೆಗಳಲ್ಲಿ ಓದಿದವರು ಬಹುತೇಕ ಮಂದಿ ಇಂದು ಉನ್ನತ ಹುದ್ದೆಗಳಲ್ಲಿದ್ದಾರೆ. ಮನೆಗಳಲ್ಲಿ ಪೋಷಕರು ಮಕ್ಕಳ ಶೈಕ್ಷಣಿಕ ದೈನಂದಿನ ಪಾಠ ಪ್ರವಚನ, ಚಟುವಟಿಕೆಗಳ ಕುರಿತು ಗಮನ ಹರಿಸಬೇಕು. ಶಿಕ್ಷಕರೊಂದಿಗೆ ನಿಕಟ ಸಂಪರ್ಕವಿದ್ದು ಅವರೊಂದಿಗೆ ಚರ್ಚೆ ನಡೆಸಿ ಶಾಲೆಯ ಮತ್ತು ಮಕ್ಕಳ ಶೈಕ್ಷಣಿಕ ಅಭಿವೃದ್ದಿಗೆ ಸಲಹೆ ಸೂಚನೆಗಳನ್ನು ನೀಡಬಹುದು. ಎಂದರು.

ಶಿಕ್ಷಕ ರಾಮೇಗೌಡ ಪ್ರಾಸ್ತಾವಿಕವಾಗಿ ಮಾತನಾಡುತ್ತಾ ಮಕ್ಕಳಿಗೆ ಮೊಬೈಲ್ ಗೀಳು ತಪ್ಪಿಸಿ ಪುಸ್ತಕದ ಕಡೆ ಗಮನಹರಿಸುವಂತೆ ಪೋಷಕರು ನಿಗಾವಹಿಸಬೇಕು. ಮಕ್ಕಳ ಮನಸ್ಸು ತುಂಬಾ ಸೂಕ್ಷ್ಮ ಹಾಗೂ ಕುತೂಹಲಭರಿತವಾಗಿರುತ್ತವೆ. ಅವರ ಮನಸ್ಸುಗಳನ್ನು ಹತೋಟಿಯಲ್ಲಿಟ್ಟರೆ ಮಾತ್ರ ಅವರ ಮುಂದಿನ ವಿದ್ಯಾಭ್ಯಾಸ ಜೀವನ ಸುಗಮವಾಗುತ್ತದೆ. ಪೋಷಕರ ಮಹಾಸಭೆಯಲ್ಲಿ ಭಾಗವಹಿಸಿ ಶಿಕ್ಷಕರ ಬಗ್ಗೆ , ಭೋಧಿಸುವ ವಿಷಯ , ತರಗತಿಯ ಬಗ್ಗೆ ಜೊತೆಗೆ ಮಕ್ಕಳ ತಪ್ಪು ಒಪ್ಪುಗಳನ್ನು ಶಿಕ್ಷಕರ ಗಮನಕ್ಕೆ ತಂದಾಗ ಮುಂದಿನ ದಿನಗಳಲ್ಲಿ ಸರಿಪಡಿಸಿಕೊಳ್ಳಲು ಸಹಕಾರಿಯಾಗುತ್ತದೆ ಎಂದರು.

# " ಮೊಲೆ ಮುಡಿ ಬಂದರೆ ಹೆಣ್ಣೆಂಬರು, ಗಡ್ಡ ಮೀಸೆ ಬಂದರೆ ಗಂಡೆಂಬರು

ಇತ್ತೀಚೆಗೆ ಸಿನಿಮಾ ನಟಿಯರು ಪಾಪರಾಜಿಗಳು ಎಂದು ಕರೆಯಲ್ಪಡುವ ಕೆಲವು ಛಾಯಾಚಿತ್ರಗಾರರು ಮತ್ತು ಸಾಮಾಜಿಕ ಜಾಲತಾಣಗಳ ವಿಕೃತ ಮನಸ್ಸಿನ ಅತಿರೇಕಿಗಳ ಹುಚ್ಚಾಟಗಳಿಗೆ ಬಲಿಯಾಗಿ, ಅವರ ವಿರುದ್ಧ ಮಾತನಾಡುತ್ತಿದ್ದಾರೆ. ಅಂದರೆ ಕೆಲವು ಸಾರ್ವಜನಿಕ ಕಾರ್ಯಕ್ರಮಗಳ ಸಂದರ್ಭದಲ್ಲಿ ನಟಿಯರ ಕೆಲವು ದೃಶ್ಯಗಳನ್ನು ಸೆರೆಹಿಡಿದು, ಬೇಕಂತಲೇ ಅವರ ದೇಹದ ಉಬ್ಬು ತಗ್ಗುಗಳ ಮೇಲೆ ಕ್ಯಾಮೆರಾ ಕೇಂದ್ರೀಕರಿಸಿ ಅಥವಾ ಜೂಮ್ ಮಾಡಿ ಅವರನ್ನು ಕೆಟ್ಟದಾಗಿ ತೋರಿಸುವ ಒಂದು ರೀತಿಯ ದೃಶ್ಯಾತ್ಮಕ ಲೈಂಗಿಕ ಕಿರುಕುಳ ನೀಡುತ್ತಿದ್ದಾರೆ ಎಂದು ಆರೋಪಿಸಲಾಗುತ್ತಿದೆ. ಅದಕ್ಕೆ ಕೆಲವು ಸಿನಿಮಾ ನಟರು ಸಹ ಬೆಂಬಲಿಸಿದ್ದಾರೆ.
ಯಾವುದೇ ರೀತಿಯ ಅಶ್ಲೀಲ, ದೌರ್ಜನ್ಯ, ಶೋಷಣೆ, ಹಿಂಸೆಯನ್ನು ಎಲ್ಲರೂ ಖಂಡಿಸಲೇಬೇಕು. ಅದಕ್ಕೆ ಪ್ರಬುದ್ಧ ಮನಸ್ಸುಗಳಾದ ಎಲ್ಲರೂ ಬೆಂಬಲಿಸಿವಿದೆ. ಜೊತೆಗೆ,
ಈ ಕೃತಕ ಬುದ್ಧಿಮತ್ತೆಯ ಅತ್ಯಂತ ಆಧುನಿಕ ಕಾಲಘಟ್ಟದಲ್ಲಿ ಈ ವಿಷಯವನ್ನು ಸೂಕ್ಷ್ಮವಾಗಿ, ವಿಶಾಲವಾಗಿ, ಮುಕ್ತವಾಗಿ, ಯಾವುದೇ ಭಾವನಾತ್ಮಕ ಅಂಶಗಳಿಗೆ ಒಳಗಾಗದೆ ನಿಂತು ನೋಡಿದಾಗ......
ಕೇವಲ ಪಾಪರಾಜಿಗಳು ಮಾತ್ರವಲ್ಲ, ಕೆಲವೊಬ್ಬ ಸಾಮಾನ್ಯ ವ್ಯಕ್ತಿಗಳು ಸಹ ಮಹಿಳೆಯರ ದೃಶ್ಯಗಳನ್ನು ಜೂಮ್ ಮಾಡಿ ತಮಗೆ ಆಸಕ್ತಿ ಇರುವ ಭಾಗಗಳನ್ನು ತೀರ ಹತ್ತಿರದಿಂದ ನೋಡುವ ತಂತ್ರಜ್ಞಾನ ಉಪಯೋಗಿಸಿಕೊಂಡು ಅದನ್ನು ದುರುಪಯೋಗ ಪಡಿಸಿಕೊಳ್ಳುವ ವಾತಾವರಣ ಬೆಳೆದಿದೆ. ಇನ್ನೂ ಕೆಲವರು ಮತ್ತಷ್ಟು ಮುಂದುವರಿದು ಆಧುನಿಕ ತಂತ್ರಜ್ಞಾನದ ಬಳಕೆ ತಿಳಿದಿದ್ದರೆ ಆ ಮಹಿಳೆಯರ ಮೈ ಮೇಲಿನ ಹೊದಿಕೆಯನ್ನು ಸಹ ತೆಗೆದಂತೆ ಮಾಡಿ ನಗ್ನ ದೃಶ್ಯಗಳನ್ನು ವೀಕ್ಷಿಸುವ ಸಾಧ್ಯತೆಯೂ ಇದೆ ಮತ್ತು ಅದನ್ನೇ ಚಟವಾಗಿ ಬೆಳೆಸಿಕೊಂಡಿದ್ದಾರೆ ಎಂದು ಕೇಳಲ್ಪಟ್ಟಿದ್ದೇನೆ.
ಮೂಲತಃ ಪ್ರಕೃತಿಯೇ ಬೆತ್ತಲು ಮತ್ತು ಅದೇ ಸಹಜ ಸೌಂದರ್ಯ. ಎಲ್ಲಾ ಜೀವಿಗಳು ಸಹ ಬೆತ್ತಲೆ ಮತ್ತು ಹುಟ್ಟಿನಿಂದ ಮನುಷ್ಯ ಪ್ರಾಣಿ ಸಹ. ಆದರೆ ಎಲ್ಲೋ ನಾಗರಿಕತೆ ಎಂಬ ಭ್ರಮೆ ಬೆಳೆದಂತೆ ಅಥವಾ ಸ್ವಚ್ಛತೆಯ ಕಾರಣಕ್ಕಾಗಿ ಅಥವಾ ರಕ್ಷಣೆಯ ವಿಧಾನವಾಗಿ ಅತ್ಯಂತ ತೆಳುವಾದ ತುಂಡು ಬಟ್ಟೆಗಳ ಮೈ ಮುಚ್ಚತೊಡಗಿರಬೇಕು. ಏಕೆಂದರೆ ಅದು ಗಾಳಿ, ನೀರು, ಆಹಾರದ ನಂತರದ ಬದುಕಿನ ಅತ್ಯಂತ ಅನಿವಾರ್ಯ ಅವಶ್ಯಕತೆಯಾಗಿ ಬೆಳವಣಿಗೆ ಹೊಂದಿದೆ. ಈಗ ಟೆಕ್ಸ್ ಟೈಲ್ ಟೆಕ್ನಾಲಜಿ ಮತ್ತು ಫ್ಯಾಷನ್ ಡಿಸೈನಿಂಗ್ ಒಂದು ಬೃಹತ್ ಉದ್ಯಮವಾಗಿ ಬೆಳವಣಿಗೆ ಹೊಂದಿದೆ......
ಸಾಮಾನ್ಯ ಅರಿವಿನ ಎಲ್ಲರಿಗೂ ತಿಳಿದಿದೆ, ಬಟ್ಟೆಗಳ ಹಿಂದಿನ ಅಂಗಾಗಗಳ ಬಗ್ಗೆ. ಅದನ್ನು ಯಾರೋ ಹುಚ್ಚರು ಅಥವಾ ವಿಕೃತರು ಅಥವಾ ಕ್ರಿಮಿನಲ್ ಗಳು ಚಿತ್ರೀಕರಿಸಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟರೆ ನಾವು ಮಾಡುವುದಾದರೂ ಏನು.



ನಮ್ಮ ಹೆಣ್ಣು ಮಕ್ಕಳು ನಮ್ಮದೇ ದೇಹದ ಮುಂದುವರಿದ ಇನ್ನೊಂದು ಭಾಗ ಮಾತ್ರ. ಬದುಕಲು ಗಾಳಿ, ನೀರು, ಆಹಾರ ಸೇವಿಸಲು ಇರುವ ರಂಧ್ರಗಳಂತೆ ಸಂತತಿಯ ಮುಂದುವರಿಕೆಗೆ ಕೆಲವು ಅಂಗಗಳಿವೆ ಅಷ್ಟೇ. ಹುಚ್ಚ ಅಥವಾ ಹುಚ್ಚಿ ಅದನ್ನು ಚಿತ್ರೀಕರಿಸಿದರೆ ಅದು ಹುಚ್ಚರ ಸಮಸ್ಯೆ. ನಾವ್ಯಾಕೇ ತಲೆಕೆಡಿಸಿಕೊಳ್ಳಬೇಕು.....
ಆದ್ದರಿಂದ ಈ ವಿಕೃತ ಹುಚ್ಚರ ಸಂತೆಯಲ್ಲಿ ಅದನ್ನು ತಡೆಯುವುದು ಸಾಧ್ಯವೇ ಇಲ್ಲ. ಆದರೆ ಸಾರ್ವಜನಿಕವಾಗಿ ಅದನ್ನು ಪ್ರದರ್ಶಿಸುವವರ ವಿರುದ್ಧ ನಿಷೇಧ ಹೇರುವ ಅಥವಾ ಕಾನೂನು ಕ್ರಮ ತೆಗೆದುಕೊಳ್ಳುವ ಸಾಧ್ಯತೆ ಮಾತ್ರ ಇದೆ.
ನಮ್ಮ ಸುತ್ತಮುತ್ತಲು ನಡೆದರೆ ಅಥವಾ ಪರಿಚಿತರ ನಡುವೆ ನಡೆದರೆ ಹೇಗೋ ತಡೆಯಬಹುದು. ಆದರೆ ವಿಶ್ವದ ಯಾವುದೋ ಮೂಲೆಯಲ್ಲಿ, ಯಾರೋ ವ್ಯಕ್ತಿ, ಯಾರಿಗೂ ಕಂಡುಹಿಡಿಯಲು ಸಾಧ್ಯವಿಲ್ಲದಂತೆ ಸಾಮಾಜಿಕ ಜಾಲತಾಣಗಳಲ್ಲಿ ಅಪ್ಲೋಡ್ ಮಾಡಿದರೆ ಅದನ್ನು ತಡೆಯುವುದು ತುಂಬಾ ಕಷ್ಟ. ಜೊತೆಗೆ ಎಷ್ಟು ಜನರ ಮೇಲೆ ಅಂತ ಈ ರೀತಿಯ ಕ್ರಮ ಕೈಗೊಳ್ಳುವುದು.....
ಇದನ್ನು ಮೀರಿ ನಾವು ಮತ್ತೊಂದು ಮಾನಸಿಕ ಹಂತವನ್ನು ತಲುಪಬೇಕಾದ ಪರಿಸ್ಥಿತಿಯಲ್ಲಿದ್ದೇವೆ. ಅಂದರೆ ಶೀಲಾ ಅಶ್ಲೀಲಗಳು ದೇಹದ ಯಾವುದೇ ಭಾಗದಲ್ಲಿ ಅಡಗಿಲ್ಲ, ಮಾನಸಿಕವಾಗಿಯೂ ಶೀಲಾ ಅಶ್ಲೀಲಗಳ ಅಸ್ತಿತ್ವವೇ ಇಲ್ಲ, ಮನುಷ್ಯ ಎಂಬ ಪ್ರಾಣಿ, ಗಂಡು ಹೆಣ್ಣಿನ ರೂಪದಲ್ಲಿ, ಮೈಮೇಲೆ ಅತ್ಯಂತ ತೆಳುವಾದ ಬಟ್ಟೆಗಳನ್ನು ಹಾಕಿಕೊಂಡು ಈ ಜನಾಂಗವನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾನೆ/ಳೆ.
ಹೆಣ್ಣಾಗಲಿ ಗಂಡಾಗಲಿ, ಅವರ ಯಾವುದೇ ಗುಪ್ತಾಂಗಗಳಾಗಲಿ, ಶೀಲವೂ ಅಲ್ಲ, ಅಶ್ಲೀಲವು ಅಲ್ಲ. ಕಣ್ಣು, ಕಿವಿ, ಕೈ, ಕಾಲು, ಶಿಶ್ನ, ಯೋನಿ, ತಲೆಯಂತೆ ಎಲ್ಲವೂ ಪ್ರಕೃತಿಯ ಸಹಜ ಕೊಡುಗೆ. ಗುಪ್ತಾಂಗವೂ ಇಲ್ಲ, ಮುಕ್ತಾಂಗವೂ ಇಲ್ಲ, ಬಾಯಿಯೂ ಒಂದೇ, ಗುದದ್ವಾರವೂ ಒಂದೇ. ಅದರ ಕೆಲಸ ಅದು ನಿರ್ವಹಿಸುತ್ತದೆ. ಅದಿಲ್ಲದೆ ಮನುಷ್ಯನಿಗೆ ಅಸ್ತಿತ್ವವೇ ಇಲ್ಲ. ಅದನ್ನು ವಿಶೇಷವಾಗಿ ಗುರುತಿಸುವ ಅವಶ್ಯಕತೆಯೂ ಇಲ್ಲ. ಊಟ, ನಿದ್ದೆ, ವಿಸರ್ಜನೆ, ಪ್ರಣಯ, ಮಿಲನ ಎಲ್ಲವೂ ಅತ್ಯಂತ ಸಹಜವಾದದ್ದು.
ಎಲ್ಲಾ ಪ್ರಾಣಿ ಪಕ್ಷಿಗಳು ಮುಖ್ಯವಾಗಿ ನಾಯಿ, ಹಸು, ಕೋಳಿ, ಕೋತಿ, ಆನೆ ಮುಂತಾದವು ಒಂದು ಚೂರೂ ಬಟ್ಟೆ ಹಾಕಿಕೊಳ್ಳದೆ, ನಮ್ಮಂತೆ ಆಸಕ್ತಿ, ಅವಕಾಶಕ್ಕೆ ಅನುಗುಣವಾಗಿ ಸಾರ್ವಜನಿಕವಾಗಿಯೇ ಲೈಂಗಿಕ ಕ್ರಿಯೆಯಲ್ಲಿ ತೊಡಗುತ್ತವೆ ಮತ್ತು ತಮ್ಮ ವಾಂಛೆಗಳನ್ನು ಪೂರೈಸಿಕೊಂಡು ತಮ್ಮ ಪೀಳಿಗೆಯನ್ನು ಮುಂದುವರಿಸುತ್ತವೆ.
ಅಂದಮೇಲೆ ನಮ್ಮದೇನು ವಿಶೇಷವಿಲ್ಲ. ಅದಕ್ಕಿಂತ ಹೆಚ್ಚಾಗಿ ಅವುಗಳಿಗೆ ಯಾವುದೇ ನೀತಿ, ನಿಯಮ, ರಕ್ಷಣೆ, ಏನೂ ಇಲ್ಲ. ನಮಗಾದರೇ ಕುಟುಂಬ ವ್ಯವಸ್ಥೆ, ಪೊಲೀಸು, ಕಾನೂನು, ರಕ್ಷಣೆ ಎಲ್ಲವೂ ಇದೆ. ನಮ್ಮ ದೊಡ್ಡ ಅನುಭಾವಿಕ ಇತಿಹಾಸವು ಇದೆ. ಒಳ್ಳೆಯದು ಮತ್ತು ಕೆಟ್ಟದ್ದರ ಅರಿವಿದೆ. ಅಂದಮೇಲೆ ನಮಗೆ ಯಾವ ಶೀಲಾ ಅಶ್ಲೀಲ.
ಸಹಜವಾಗಿ ಬದುಕುವ ಯೋಗ್ಯತೆ ಇಲ್ಲದೇ, ಯಾರೋ ಹುಚ್ಚರು, ಇನ್ಯಾರೋ ಹೆಣ್ಣಿನ ಉಬ್ಬುತಗ್ಗುಗಳನ್ನು ತೋರಿಸಿದರೆ ಅದು ಆ ಹೆಣ್ಣಿನ ತಪ್ಪಲ್ಲ. ಅದನ್ನು ಅನಾವಶ್ಯಕವಾಗಿ ತೋರಿಸಿದವನ ವಿಕೃತಿಯಷ್ಟೇ. ಅದಕ್ಕೆ ಅವನನ್ನು ಹೊಣೆ ಮಾಡಬೇಕೇ ಹೊರೆತು ಹೆಣ್ಣನ್ನಲ್ಲ. ಜೊತೆಗೆ ಆ ರೀತಿ ಮಾಡಿದ ವ್ಯಕ್ತಿ ಸ್ವತಃ ತಾಯಿಯ ಯೋನಿಯಿಂದ ಜನಿಸಿ, ಆಕೆಯ ಎದೆ ಹಾಲು ಕುಡಿದು ಬೆಳೆದವನು. ನಾವೆಲ್ಲರೂ ಸಹ ಅದೇ ರೀತಿಯೇ ಹುಟ್ಟಿರುವುದು. ಅಷ್ಟೂ ತಿಳುವಳಿಕೆ ಇಲ್ಲದ ವ್ಯಕ್ತಿ ಈ ಸಮಾಜದ ನಾಗರಿಕನಾಗಲು ಅನರ್ಹ. ಅವನೊಬ್ಬ ಮಾನಸಿಕ ಅಸ್ವಸ್ಥ ಅಷ್ಟೇ. ಹುಚ್ಚಾಸ್ಪತ್ರೆಯ ರೋಗಿ ಎಂದೇ ಪರಿಗಣಿಸಬೇಕು.
ನಮ್ಮ ತಾಯಿ, ತಂಗಿ, ಅಕ್ಕ, ಅತ್ತಿಗೆ, ಅಜ್ಜಿ, ಸೊಸೆ, ಮಗಳು, ಹೆಂಡತಿ ಎಲ್ಲರೂ ಹೆಣ್ಣುಗಳೇ. ಅಂದಮೇಲೆ ಮತ್ತೊಂದು ಹೆಣ್ಣಿನ ಅವಹೇಳನ ಮಾಡುವುದು ವಿಕೃತಿಯೇ ಹೊರತು ಬೇರೇನೂ ಅಲ್ಲ. ವಿಕೃತರಿಗೆ ಹೆಚ್ಚಿನ ಮಹತ್ವ ಕೊಡುವ ಅವಶ್ಯಕತೆಯೂ ಇಲ್ಲ ಮತ್ತು ಹಾಗೆ ತೋರಿಸಿದರೆ ಅದನ್ನು ನಿರ್ಲಕ್ಷಿಸಿ ಮುಂದೆ ಹೋಗುವ ಮನಸ್ಥಿತಿಯನ್ನು ಗಂಡು ಹೆಣ್ಣು ಇಬ್ಬರೂ ಬೆಳೆಸಿಕೊಳ್ಳಬೇಕು.
ಹಾಗೆಯೇ ಇದರ ಇನ್ನೊಂದು ಮುಖವೂ ಇದೆ. ಇಂದು ಯಾರು ಪಾಪರಾಜಿಗಳನ್ನು, ಸಾಮಾಜಿಕ ಜಾಲತಾಣಗಳ ವಿಕೃತರನ್ನು ದೂರುತ್ತಿದ್ದಾರೆಯೋ, ಅದೇ ಸಿನಿಮಾ ನಟ ನಟಿಯರು ಚಿತ್ರರಂಗದಲ್ಲಿ ಇದೇ ಪಾಪರಾಜಿಗಳಂತೆ ದೃಶ್ಯವಿಕೃತಿಯನ್ನು ತಮ್ಮ ಚಿತ್ರಗಳಲ್ಲಿ ಯಾವ ರೀತಿ ತೋರಿಸುತ್ತಿದ್ದಾರೆ ಎಂಬುದನ್ನು ಪ್ರಶ್ನಿಸಬೇಕಾಗುತ್ತದೆ.
ಪಾಪರಾಜಿಗಳಿಗೆ ನಿಜವಾದ ಪ್ರೇರಣೆ ನೀಡಿದ್ದೇ ಈ ಸಿನಿಮಾ ಮತ್ತು ಮಾಡೆಲಿಂಗ್ ಲೋಕದ ನಟ ನಟಿಯರು, ನಿರ್ಮಾಪಕರು ಮತ್ತು ನಿರ್ದೇಶಕರು.
ತಮ್ಮ ಸಿನಿಮಾಗಳಲ್ಲಿ ಇಂದು ಪಾಪರಾಜಿಗಳು ಮಾಡುವಂತೆ ಹೆಣ್ಣಿನ ಉಬ್ಬುತಗ್ಗುಗಳನ್ನು ಅತ್ಯಂತ ಕೆಟ್ಟದಾಗಿ, ಉದ್ದೇಶಪೂರ್ವಕವಾಗಿ, ನಿರ್ಧಿಷ್ಟವಾಗಿ ತೋರಿಸಿ ಅವರನ್ನು ಪ್ರಚೋದಿಸಿದ್ದು ಇದೇ ನಟ ನಟಿಯರು. ಹೆಣ್ಣನ್ನು ಭೋಗದ ವಸ್ತುವೆಂದು ಪರಿಗಣಿಸುವ ಧಾರ್ಮಿಕ ಮತಾಂಧತೆಯ ನಂತರ ಅತಿ ಹೆಚ್ಚು ಹೆಣ್ಣನ್ನು ದುರುಪಯೋಗಪಡಿಸಿಕೊಂಡಿರುವುದು ಈ ಮನರಂಜನಾ ಉದ್ಯಮೇ ಆಗಿದೆ. ಇದೇ ನಟ ನಟಿಯರೇ ಅಲ್ಲಿ ಕೆಟ್ಟದಾಗಿ ನರ್ತಿಸಿ ಈಗ ಪಾಪರಾಜಿಗಳನ್ನು ನಿಂದಿಸುತ್ತಿರುವುದು.
ಇದರ ಬಗ್ಗೆ ಆತ್ಮವಿಮರ್ಶೆ ಮಾಡಿಕೊಳ್ಳಬೇಕು. ಅಭಿನಯ, ಕಥೆ, ಸಿನಿಮಾ ಎಲ್ಲವೂ ಸಹನೀಯ. ಆದರೆ ಉದ್ದೇಶಪೂರ್ವಕವಾಗಿ ಹೆಣ್ಣಿನ ಅಂಗಾಂಗಗಳ ಪ್ರದರ್ಶನಗಳ ಮೂಲಕವೇ ಬೆಳೆದು ಬಂದಿರುವುದು ಈ ಸಿನಿಮಾ ಎಂಬ ಪ್ರದರ್ಶನ ಉದ್ಯಮ.
ಆದ್ದರಿಂದ ಅಲ್ಲಿಯೂ ಕೂಡ ನಿಯಂತ್ರಣವನ್ನು ಸಾಧಿಸಬೇಕು. ಸಮಾಜದ ಮೌಲ್ಯಗಳನ್ನ ಎತ್ತಿ ಹಿಡಿಯಬೇಕು. ವ್ಯವಹಾರ, ಪ್ರಖ್ಯಾತಿ, ಹಣವೇ ಪ್ರಧಾನವಾಗಿ, ಮೌಲ್ಯಗಳ ಅಧ:ಪತನಕ್ಕೆ ಕಾರಣವಾಗಿ, ಈಗ ಅವರುಗಳು ಈ ಬಗ್ಗೆ ಮಾತನಾಡುವುದು ಆತ್ಮ ವಂಚನೆಯಾಗುತ್ತದೆ. ಯಾವುದೇ ಸಭೆ ಸಮಾರಂಭ ಪಾರ್ಟಿಗಳಲ್ಲಿ ಅತ್ಯಂತ ಕೃತಕ ಮತ್ತು ಅಸಹಜವಾಗಿ ತಮ್ಮನ್ನು ಬಿಂಬಿಸಿಕೊಳ್ಳುವ ಇದೇ ನಟ ನಟಿಯರು, ಈ ಪಾಪರಾಜಿಗಳ ಅತಿರೇಕಕ್ಕೆ ಮೂಲ ಕಾರಣವೂ ಹೌದಲ್ಲವೇ. ಆದ್ದರಿಂದ ಇಡೀ ಸಮಾಜದಲ್ಲಿ ಒಳ್ಳೆಯದನ್ನು, ಒಳ್ಳೆಯತನವನ್ನು, ಒಳ್ಳೆಯ ತಿಳುವಳಿಕೆಯನ್ನು, ಒಳ್ಳೆಯ ನಡವಳಿಕೆಯನ್ನು ಪ್ರತಿಯೊಬ್ಬರು ಅಳವಡಿಸಿಕೊಳ್ಳಬೇಕು. ಆಗ ಕೆಟ್ಟದ್ದನ್ನು ಪ್ರಶ್ನಿಸುವ ನೈತಿಕತೆ ನಮ್ಮದಾಗುತ್ತದೆ. ಇಲ್ಲದಿದ್ದರೆ ಮುಂದೊಂದು ದಿನ ನೈತಿಕ ಮೌಲ್ಯಗಳು ಕುಸಿದಾಗ ನಾವು ಅದನ್ನು ಪ್ರಶ್ನಿಸಲು ಕಷ್ಟವಾಗುತ್ತದೆ.
ಹೆಣ್ಣಿನ ಸಮಾನತೆ, ಸ್ವಾತಂತ್ರ್ಯ, ಮುಕ್ತತೆಯನ್ನು ಸಂಪೂರ್ಣವಾಗಿ ಬೆಂಬಲಿಸುತ್ತ,

" ಮೊಲೆ ಮುಡಿ ಬಂದರೆ ಹೆಣ್ಣೆಂಬರು,
ಗಡ್ಡ ಮೀಸೆ ಬಂದರೆ ಗಂಡೆಂಬರು,
ನಡುವೆ ಸುಳಿವ ಆತ್ಮನು ಗಂಡು ಅಲ್ಲ ಹೆಣ್ಣು ಅಲ್ಲ ಕಾಣ ರಾಮನಾಥ....."
ಜೇಡರ ದಾಸಿಮಯ್ಯ.......

ಪ್ರಬುದ್ಧ ಮನಸ್ಸು ಪ್ರಬುದ್ಧ ಸಮಾಜ,
ವಿವೇಕಾನಂದ. ಎಚ್. ಕೆ. 9663750451.......

# ಸ್ತ್ರೀ ಸಮಾನಳಲ್ಲ; ಪುರುಷನಿಗಿಂತ ಸಮರ್ಥಳು....! ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಪ್ರತಿವರ್ಷ ಮಾರ್ಚ್ 8 ರಂದು ಆಚರಿಸಲಾಗುತ್ತದೆ. ಇದು ಮಹಿಳೆಯರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಸಾಧನೆಗಳನ್ನು ಗುರುತಿಸಿ, ಲಿಂಗ ಸಮಾನತೆ, ಮಹಿಳಾ ಹಕ್ಕುಗಳು ಮತ್ತು ಸಬಲೀಕರಣಕ್ಕಾಗಿ ಜಾಗೃತಿ ಮೂಡಿಸುವ ದಿನವಾಗಿದೆ. 1900ರ ಆರಂಭದಲ್ಲಿ ಕಾರ್ಮಿಕ ಚಳವಳಿಗಳಿಂದ ಹುಟ್ಟಿಕೊಂಡ ಈ ದಿನ, ಇಂದು ಮಹಿಳೆಯರ ಮೇಲಿನ ದೌರ್ಜನ್ಯಗಳ ವಿರುದ್ಧ ಹೋರಾಡಲು ಮತ್ತು ಸಮಾನತೆಗಾಗಿ ಒಟ್ಟಾಗುವ ದಿನವಾಗಿದೆ.

### ಮಹಿಳಾ ದಿನಾಚರಣೆಯ ಪ್ರಮುಖಾಂಶಗಳು:

**ಹಿನ್ನೆಲೆ:** 1908ರಲ್ಲಿ ನ್ಯೂಯಾರ್ಕ್‌ನಲ್ಲಿ ಮಹಿಳೆಯರು ಉತ್ತಮ ವೇತನ ಮತ್ತು ಮತದಾನದ ಹಕ್ಕಿಗಾಗಿ ನಡೆಸಿದ ಪ್ರತಿಭಟನೆಯಿಂದ ಈ ಆಚರಣೆ ಆರಂಭವಾಯಿತು.
ಅಂತರರಾಷ್ಟ್ರೀಯ ಮಾನ್ಯತೆ: 1977 ರಲ್ಲಿ ವಿಶ್ವಸಂಸ್ಥೆಯು ಮಾರ್ಚ್ 8 ಅನ್ನು ಅಧಿಕೃತವಾಗಿ ಅಂತರರಾಷ್ಟ್ರೀಯ ಮಹಿಳಾ ದಿನವನ್ನಾಗಿ ಘೋಷಿಸಿತು.
**ಉದ್ದೇಶ:** ಲಿಂಗಭೇದ ವಿರೋಧಿಸುವುದು, ಮಹಿಳೆಯರ ಸುರಕ್ಷತೆ ಮತ್ತು ಹಕ್ಕುಗಳನ್ನು ಕಾಪಾಡುವುದು, ಹಾಗೂ ಅವರನ್ನು ಗೌರವಿಸುವುದು.
**2026 ರ ಥೀಮ್:** 2026 ರ ಅಂತರರಾಷ್ಟ್ರೀಯ ಮಹಿಳಾ ದಿನದಂದು **“Rights. Justice. Action. For ALL Women and Girls”** (ಎಲ್ಲಾ ಮಹಿಳೆಯರು ಮತ್ತು ಹೆಣ್ಣುಮಕ್ಕಳಿಗೆ ಹಕ್ಕುಗಳು, ನ್ಯಾಯ, ಕ್ರಮ) ಎಂಬ ಘೋಷಣೆಯಡಿ, ಸಮಾನ ನ್ಯಾಯಕ್ಕಾಗಿ ಅಡೆತಡೆಗಳನ್ನು ತೆಗೆದುಹಾಕಲು ಒತ್ತಾಯಿಸಲಾಗಿದೆ.
ಈ ದಿನದಂದು ವಿಶ್ವದಾದ್ಯಂತ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳೆಯರನ್ನು ಗೌರವಿಸಲಾಗುತ್ತದೆ, ಶಿಕ್ಷಣ ಮತ್ತು ಆರೋಗ್ಯದ ಬಗ್ಗೆ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ.

### ಮಹಿಳಾ ದಿನಾಚರಣೆ ಏಕೆ ಆಚರಿಸುತ್ತಾರೆ?
### ಈ ಆಚರಣೆಯ ಇತಿಹಾಸದ ಬಗ್ಗೆ




ಸ್ತ್ರೀ ಎಂದರೆ ಅಷ್ಟೇ ಸಾಕೆ..ಆಕೆ ಮನೆಯ ಮಗಳ ಒಡತಿ, ಗರತಿ. ತಾಯಾಗಿ, ತಂಗಿಯಾಗಿ, ಮಡದಿಯಾಗಿ, ಅಕ್ಕನಾಗಿ ಸಲಹುವವಳು. ಅವಳನ್ನು ಸ್ತ್ರೀ ಎಂದರೆ ಅಷ್ಟೇ ಸಾಕೆ? ಒಂದು ಮನೆಯ ಮಗಳಾಗಿ ಹುಟ್ಟಿ, ಮತ್ತೊಂದು ಮನೆಗೆ ಬೆಳಕಾಗುವವಳು. ಒಂದು ಹೊಸ ಜೀವಕ್ಕೆ ಜೀವ ಆಗುವವಳು. ಬದುಕಿಡೀ ಗಂಧದಂತೆ ತೇಯುವವಳು, ದೀಪದಂತೆ ಉರಿಯುವವಳು. ಅವಳು ಬರೀ ಹೆಣ್ಣಲ್ಲ, ಜಗತ್ತಿಗೆ ಕಣ್ಣು...ಪ್ರತಿ ದಿನ ದುಡಿಯುವ ಅವಳಿಗಾಗಿ ಒಂದು ದಿನ ಅವಳ ಜೀವನದ ಕರ್ತವ್ಯವನ್ನು ನೆನಪಿಸಬಾರದೇ?
ಪ್ರತಿ ವರ್ಷ ಮಾರ್ಚ್ 8ರಂದು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ..ಈ ದಿನ ಮಹಿಳೆಯರ ಸಾಧನೆಯನ್ನು ಗೌಗೌರವಿಸುವುದರ ಜೊತೆಗೆ ಲಿಂಗ ಸಮಾನತೆ ಬಗ್ಗೆ ಜಾಗೃತಿ ಮೂಡಿಸುವ ಮಹತ್ವದ ದಿನವಾಗಿದೆ. ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿ ಮಹಿಳೆಯರು ಮಾಡಿರುವ ಕೊಡುಗೆಯನ್ನು ಈ ದಿನದಲ್ಲಿ ವಿಶೇಷವಾಗಿ ನೆನಪಿಸಲಾಗುತ್ತದೆ.2026ರ ಅಂತರರಾಷ್ಟ್ರೀಯ ಮಹಿಳಾ ದಿನದ ವಿಷಯವಾಗಿ ವಿಶ್ವಸಂಸ್ಥೆ "ಹಕ್ಕುಗಳು, ನ್ಯಾಯ ಮತ್ತು ಕ್ರಿಯೆ – ಎಲ್ಲಾ ಮಹಿಳೆಯರು ಮತ್ತು ಹುಡುಗಿಯರಿಗಾಗಿ" ಎಂಬ ಸಂದೇಶವನ್ನು ಘೋಷಿಸಿದೆ. ಈ ವಿಷಯವು ಮಹಿಳೆಯರಿಗೆ ಕಾನೂನಿನಲ್ಲಿ ಇರುವ ಹಕ್ಕುಗಳು ನಿಜ ಜೀವನದಲ್ಲಿಯೂ ಅನುಷ್ಠಾನವಾಗಬೇಕು ಎಂಬುದನ್ನು ಒತ್ತಿಹೇಳುತ್ತದೆ. ಇನ್ನೂ ಜಗತ್ತಿನ ಹಲವು ಭಾಗಗಳಲ್ಲಿ ಮಹಿಳೆಯರು ಪುರುಷರಿಗೆ ಇರುವ ಹಕ್ಕುಗಳಿಗಿಂತ ಕಡಿಮೆ ಅವಕಾಶಗಳನ್ನು ಪಡೆಯುತ್ತಿದ್ದಾರೆ ಎಂಬುದು ಹಲವು ಅಧ್ಯಯನಗಳಿಂದ ತಿಳಿದುಬಂದಿದೆ.

### ಮಹಿಳಾ ದಿನಾಚರಣೆಯ ಇತಿಹಾಸ ತಿಳಿಯಿರಿ:

ಮಾರ್ಚ್ 8 ದಿನಾಂಕಕ್ಕೂ ವಿಶೇಷವಾದ ಇತಿಹಾಸವಿದೆ. 1908ರಲ್ಲಿ ಅಮೆರಿಕದ ನ್ಯೂಯಾರ್ಕ್ ನಗರದಲ್ಲಿ ಸಾವಿರಾರು ಮಹಿಳೆಯರು ಉತ್ತಮ ವೇತನ, ಕಡಿಮೆ ಕೆಲಸದ ಸಮಯ ಮತ್ತು ಮತದಾನದ ಹಕ್ಕಿಗಾಗಿ ಮೆರವಣಿಗೆ ನಡೆಸಿದರು. ನಂತರ 1910ರಲ್ಲಿ ಡೆನ್ಮಾರ್ಕ್ನ ಕೋಪನ್ಹೇಗನ್ನಲ್ಲಿ ನಡೆದ ಮಹಿಳಾ ಸಮ್ಮೇಳನದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನ ಆಚರಿಸುವ ಕಲ್ಪನೆ ಮುಂದುವರಿಯಿತು. 1917ರಲ್ಲಿ ರಷ್ಯಾದಲ್ಲಿ ಮಹಿಳೆಯರು "ಬ್ರೆಡ್ ಮತ್ತು ಶಾಂತಿ"ಗಾಗಿ ನಡೆಸಿದ ಪ್ರತಿಭಟನೆ ಕೂಡ ಈ ದಿನದ ಇತಿಹಾಸದಲ್ಲಿ ಮಹತ್ವದ ಪಾತ್ರ ವಹಿಸಿದೆ.
ಭಾರತದಲ್ಲಿಯೂ ಮಹಿಳಾ ದಿನವನ್ನು ವಿವಿಧ ರೀತಿಯಲ್ಲಿ ಆಚರಿಸಲಾಗುತ್ತದೆ. ಸರ್ಕಾರ ಮತ್ತು ಸಾಮಾಜಿಕ ಸಂಸ್ಥೆಗಳು ಮಹಿಳೆಯರ ಶಿಕ್ಷಣ, ಆರೋಗ್ಯ ಮತ್ತು ಸುರಕ್ಷತೆ ಕುರಿತು ಜಾಗೃತಿ ಕಾರ್ಯಕ್ರಮಗಳನ್ನು ನಡೆಸುತ್ತವೆ. ಕೆಲ ನಗರಗಳಲ್ಲಿ ಮಹಿಳೆಯರ ಆರೋಗ್ಯವನ್ನು ಉತ್ತೇಜಿಸಲು ವಿಶೇಷ ಓಟಗಳು ಮತ್ತು ಸಾರ್ವಜನಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ.
ಇಂದಿನ ಸಮಾಜದಲ್ಲಿ ಮಹಿಳೆಯರು ಶಿಕ್ಷಣ, ವಿಜ್ಞಾನ, ರಾಜಕೀಯ, ಕ್ರೀಡೆ ಮತ್ತು ವ್ಯಾಪಾರ ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ಸಾಧನೆ ಮಾಡುತ್ತಿದ್ದಾರೆ. ಆದರೆ ಇನ್ನೂ ಸಮಾನ ಅವಕಾಶ ಮತ್ತು ಸುರಕ್ಷತೆಗಾಗಿ ಹೋರಾಟ ಮುಂದುವರಿಯುತ್ತಿದೆ. ಆದ್ದರಿಂದ ಮಹಿಳಾ ದಿನವು ಕೇವಲ ಆಚರಣೆಯ ದಿನವಲ್ಲ, ಮಹಿಳೆಯರ ಸಮಾನತೆ ಮತ್ತು ಗೌರವಕ್ಕಾಗಿ ಸಮಾಜ ಒಟ್ಟಾಗಿ ಕೆಲಸ ಮಾಡುವ ಸಂಕಲ್ಪದ ದಿನವಾಗಿದೆ.



ನಾವು ಮಹಿಳೆಯರ ಹಕ್ಕುಗಳನ್ನು ರಕ್ಷಿಸಲು ಸಾಧ್ಯವಾಗದಿದ್ದರೆ ಅವುಗಳಿಗೆ ಅರ್ಥವಿಲ್ಲ.
ನ್ಯಾಯ ವ್ಯವಸ್ಥೆಗಳು ಒತ್ತಡದಲ್ಲಿರುವ ಸಮಯದಲ್ಲಿ 2026 ರ ಅಂತರರಾಷ್ಟ್ರೀಯ ಮಹಿಳಾ ದಿನ ಬರುತ್ತದೆ.
ಸಂಘರ್ಷ, ದಮನ ಮತ್ತು ರಾಜಕೀಯ ಉದ್ವಿಗ್ನತೆಗಳು ಕಾನೂನಿನ ನಿಯಮವನ್ನು ದುರ್ಬಲಗೊಳಿಸುತ್ತಿವೆ.
ಪರಿಣಾಮವಾಗಿ – ಮಹಿಳೆಯರು ಮತ್ತು ಹುಡುಗಿಯರು ಪುರುಷರಿಗಿಂತ ಕೇವಲ ಶೇಕಡ 64 ರಷ್ಟು ಕಾನೂನುಬದ್ಧ ಹಕ್ಕುಗಳನ್ನು ಹೊಂದಿದ್ದಾರೆ .
ಮಹಿಳೆಯರನ್ನು ದೂರವಿಡಲಾಗುತ್ತದೆ, ನಂಬುವುದಿಲ್ಲ, ಮತ್ತೆ ಬಲಿಪಶುಗಳನ್ನಾಗಿ ಮಾಡಲಾಗುತ್ತದೆ ಅಥವಾ ಕಾನೂನು ಬೆಂಬಲದಿಂದ ವಂಚಿತಗೊಳಿಸಲಾಗುತ್ತದೆ. ಸಮಾನತೆ ಎಂದಿಗೂ ಬರುವುದಿಲ್ಲ.
ಮಹಿಳೆಯರು ಮತ್ತು ಹುಡುಗಿಯರು ಸಂಪೂರ್ಣ ಕಾನೂನು ರಕ್ಷಣೆ ಇಲ್ಲದೆ ಬದುಕುತ್ತಿದ್ದಾರೆ.
ನ್ಯಾಯ ವಿಫಲವಾದಾಗ, ಮಹಿಳೆಯರು ಬೆಲೆ ತೆರುತ್ತಾರೆ
ನ್ಯಾಯವು ಕುರುಡಲ್ಲ. ಅದು ಅಧಿಕಾರವನ್ನು ರಕ್ಷಿಸುತ್ತದೆ ಮತ್ತು ಮಹಿಳೆಯರು ಮತ್ತು ಹುಡುಗಿಯರ ವಿರುದ್ಧ ಆಳ್ವಿಕೆ ನಡೆಸುವುದನ್ನು ಮುಂದುವರಿಸುತ್ತದೆ.
ಸಮೀಕ್ಷೆಗೊಳಗಾದ ಸುಮಾರು ಶೇಕಡಾ 70 ರಷ್ಟು ದೇಶಗಳಲ್ಲಿ, ಪುರುಷರಿಗಿಂತ ಮಹಿಳೆಯರು ನ್ಯಾಯವನ್ನು ಪಡೆಯುವಲ್ಲಿ ಹೆಚ್ಚಿನ ಅಡೆತಡೆಗಳನ್ನು ಎದುರಿಸುತ್ತಾರೆ .
ವಕೀಲರನ್ನು ನೇಮಿಸಿಕೊಳ್ಳಲು ಸಾಧ್ಯವಿಲ್ಲವೇ? ನ್ಯಾಯ ನಿರಾಕರಿಸಲಾಗಿದೆ.
ಕಾನೂನು ಶುಲ್ಕಗಳು, ಸಾರಿಗೆ, ಮಕ್ಕಳ ಆರೈಕೆ, ಕಳೆದುಹೋದ ವೇತನಗಳು ಲಕ್ಷಾಂತರ ಮಹಿಳೆಯರನ್ನು ನ್ಯಾಯ ವ್ಯವಸ್ಥೆಯಿಂದ ದೂರವಿಡುತ್ತವೆ.
ಅನ್ಯಾಯವನ್ನು ವರದಿ ಮಾಡಲು ಬಯಸುವಿರಾ? ನಿರ್ಲಕ್ಷಿಸಲ್ಪಡಲು, ನಂಬದಿರಲು ಅಥವಾ – ಇನ್ನೂ ಕೆಟ್ಟದಾಗಿ – ದೂಷಿಸಲು ಮತ್ತು ಮೌನಗೊಳಿಸಲು ಸಿದ್ಧರಾಗಿರಿ.
ಸಕ್ರಿಯ ಸಂಘರ್ಷ ವಲಯಗಳಿಂದ 50 ಕಿ.ಮೀ ವ್ಯಾಪ್ತಿಯಲ್ಲಿ ವಾಸಿಸುವ 676 ಮಿಲಿಯನ್ ಮಹಿಳೆಯರು ಮತ್ತು ಹುಡುಗಿಯರಿಗೆ , ನ್ಯಾಯ ವ್ಯವಸ್ಥೆಗಳು ಹೆಚ್ಚಾಗಿ ಇರುವುದಿಲ್ಲ ಮತ್ತು ಅಪರಾಧಿಗಳು ಶಿಕ್ಷೆಯಿಂದ ಮುಕ್ತರಾಗಿ ವರ್ತಿಸುತ್ತಾರೆ.
ಮಹಿಳೆಯರು ಮತ್ತು ಹುಡುಗಿಯರಿಗೆ ನ್ಯಾಯ ಎಂದರೆ ಏನು?
ನ್ಯಾಯವಿಲ್ಲದೆ, ಹಕ್ಕುಗಳು ಕೇವಲ ಪದಗಳಾಗಿರುತ್ತವೆ. ನ್ಯಾಯದೊಂದಿಗೆ, ಹಕ್ಕುಗಳು ಶಕ್ತಿಯಾಗುತ್ತವೆ.
ಮಹಿಳೆಯರು ಮತ್ತು ಹುಡುಗಿಯರನ್ನು ಹಿಂಸೆ, ತಾರತಮ್ಯ ಮತ್ತು ಶೋಷಣೆಯಿಂದ ರಕ್ಷಿಸುವ ಕಾನೂನುಗಳು.
ಎಲ್ಲಾ ಮಹಿಳೆಯರು ಮತ್ತು ಹುಡುಗಿಯರನ್ನು ನಂಬುವ ಮತ್ತು ಶಿಕ್ಷೆಯಿಂದ ಮುಕ್ತರಾಗುವ ನ್ಯಾಯಾಲಯಗಳು.
ಮಹಿಳೆಯರು ಮತ್ತು ಹುಡುಗಿಯರು ಪ್ರವೇಶಿಸಬಹುದಾದ ಮತ್ತು ಭರಿಸಬಹುದಾದ ಕಾನೂನು ನೆರವು.
ಹಕ್ಕುಗಳು ಉಲ್ಲಂಘಿಸಲ್ಪಟ್ಟಾಗ ಚೇತರಿಸಿಕೊಳ್ಳಲು ಬೆಂಬಲ.
ಹಕ್ಕುಗಳಿಗಾಗಿ ನೀವು ಏನು ಮಾಡಬಹುದು. ನ್ಯಾಯ. ಕ್ರಮ.
ನ್ಯಾಯವು ತನ್ನಿಂದ ತಾನೇ ಸಿಗುವುದಿಲ್ಲ. ಅದನ್ನು ನಿರ್ಮಿಸಲಾಗುತ್ತದೆ ಮತ್ತು ಅದಕ್ಕೆ ಹಣಕಾಸು ಒದಗಿಸಬೇಕು. ವಿಶ್ವಾದ್ಯಂತ ಮಹಿಳಾ ಚಳುವಳಿಗಳೊಂದಿಗೆ ನಾವು ನಿಲ್ಲುವುದನ್ನು ಮತ್ತು ಸಮಾನತೆಯನ್ನು ಆರಿಸಿಕೊಳ್ಳುವ ಸರ್ಕಾರಗಳೊಂದಿಗೆ ಕೆಲಸ ಮಾಡುವುದನ್ನು ಮುಂದುವರಿಸುವಾಗ, ಯುಎನ್ ಮಹಿಳೆಯರೊಂದಿಗೆ ಸೇರಿ ಮತ್ತು ಬೆಂಬಲಿಸಿ.

### ಸ್ತ್ರೀ ಸಮಾನಳಲ್ಲ; ಪುರುಷನಿಗಿಂತ ಸಮರ್ಥಳು!

ಳಗಾಯಿತೆಂದರೆ ಅದೇ ಗಡಿಬಿಡಿ, ಆತುರದಲ್ಲಿ ತಿಂಡಿ ಅಡುಗೆ ಮುಗಿಸಿ, ಮಕ್ಕಳಿಗೆ ಸ್ನಾನ ಮಾಡಿಸಿ, ತರಾತುರಿಯಲ್ಲಿ ತಯಾರಾಗಿ, ಅರ್ಧಂಬರ್ಧ ತಿಂಡಿ ತಿಂದು, ಹೆಗಲಮೇಲೊಂದು ಬ್ಯಾಗು ಏರಿಸಿಕೊಂಡು ಗಾಡಿಯೇರಿ ಹೊರಟರೆ ಮತ್ತೆ ನಿಲ್ಲುವುದು ಕಚೇರಿಯ ಪಾರ್ಕಿಂಗ್ ಲಾಟ್‌ನಲ್ಲೇ. ಮತ್ತದೇ ಕಚೇರಿ ವ್ಯವಹಾರ, ನಗುಮೊಗ, ಸಹೋದ್ಯೋಗಿಗಳೊಂದಿಗೆ ಮಾತುಕತೆ, ಸಂಜೆಯಾಯಿತೆಂದರೆ ಕೆಲಸ ಮುಗಿಸಿ ಮನೆಗೆ ಹೊರಡುವ ಧಾವಂತ.... ಮತ್ತೆ ಮನೆ ಸೇರಿ ಮಕ್ಕಳ ಆರೈಕೆ, ಅವರಿಗೆ ತಿಂಡಿ ತಯಾರಿ, ಗಂಡನಿಗೆ ಕಾಫಿ–ಟೀ.....ಹೀಗೆ ತನ್ನ ಬಗ್ಗೆ ಒಂದು ನಿಮಿಷವೂ ಆಲೋಚನೆ ಮಾಡಲಾಗದಷ್ಟು ಬ್ಯುಸಿಯಾಗಿದ್ದರೂ ಯಾರಿಗೂ ನೋವುಂಟು ಮಾಡದ, ಯಾರ ಮೇಲೂ ಸಿಟ್ಟಾಗದ ಸಮಾಧಾನಿ, ಹಸನ್ಮುಖಿ...
ಇದೇನಿದು? ಯಾರ ಬಗ್ಗೆ ಹೇಳಲಾಗುತ್ತಿದೆ ಎಂಬ ಗೊಂದಲ ಉಂಟಾಗುತ್ತಿದೆಯಲ್ಲವೇ? ಇದು ನಮ್ಮ ಇಂದಿನ ಮಹಿಳೆಯ ದಿನಚರಿ. ಅಂದಿನ ಮಹಿಳೆಯಂತೆ ನಾಲ್ಕು ಗೋಡೆಗಳ ನಡುವೆ, ಗಂಡ, ಮನೆ, ಮಕ್ಕಳು, ಸಂಸಾರ ಎನ್ನುತ್ತಾ ಗಂಡ ಹೇಳಿದ್ದನ್ನು ಕೇಳಿಕೊಂಡು, ಹೊಡೆದರೆ ಹೊಡೆಸಿಕೊಂಡು, ಒದ್ದರೆ ಒದೆಸಿಕೊಂಡು, ತಮ್ಮಲ್ಲಿ ಮಡುಗಟ್ಟಿಹೋಗಿರುವ ಮತ್ತು ಒತ್ತಾಯಪೂರ್ವಕವಾಗಿ ಹತ್ತಿಕ್ಕಿಕೊಂಡಿರುವ ನೋವು ನರಳಿಕೆ, ಯಾತನೆಗಳನ್ನು ಅನುಭವಿಸಿ ಜೀವನ ಸಾಗಿಸಬೇಕಾದ ಒಂದು ಪರಿಸ್ಥಿತಿ ಈಗಿಲ್ಲ(ಬಹುತೇಕ ಕಡಿಮೆಯಾಗಿದೆ). ಅದೆಲ್ಲಾ ಒಂದು ಶತಮಾನದ ಹಿಂದಿನ ಮಾತು.
ದಿನಬೆಳಗಾಯಿತೆಂದರೆ ಮನೆ, ಗಂಡ–ಮಕ್ಕಳು, ಕೆಲಸ, ಹಬ್ಬ ಹರಿದಿನಗಳು ಬಂತೆಂದರೆ ಪೂಜೆ–ಪುನಸ್ಕಾರ, ರಜಾ ದಿನಗಳು ಬಂತೆಂದರೆ ಮಕ್ಕಳಿಗಾಗಿ ಸಿಹಿತಿಂಡಿ ತಯಾರಿ, ಪ್ರವಾಸ, ಈ ಮಧ್ಯೆ ಬಿಡುವು ಸಿಕ್ಕಾಗಲೆಲ್ಲಾ ಸಮಾಜಸೇವೆಗೆ ತನ್ನನ್ನು ತೊಡಗಿಸುಕೊಳ್ಳುತ್ತಾ ಎಲ್ಲವನ್ನೂ ಬಹಳ ಜಾಣ್ಮೆಯಿಂದ ನಿಭಾಯಿಸುವ ಚಾಣಾಕ್ಷತೆ ಹೊಂದಿದ್ದಾಳೆ. ಕ್ರೀಡೆ, ರಾಜಕೀಯ, ಕಲೆ, ಸಾಹಿತ್ಯ, ರಂಗಭೂಮಿ, ಸೇನೆ, ವೈದ್ಯಕೀಯ, ವಿಜ್ಞಾನ–ತಂತ್ರಜ್ಞಾನ, ಶಿಕ್ಷಣ...ಹೀಗೆ ಪ್ರತಿಯೊಂದು ಕ್ಷೇತ್ರದಲ್ಲೂ ಮಹಿಳೆ ತನ್ನದೇ ಆದ ಛಾಪು ಮೂಡಿಸಿದ್ದಾಳೆ.
ಕೇವಲ ಮನೆಲಿಸಕ್ಕೆ, ಸಂಸಾರ ನೌಕೆ ಸಾಗಿಸುವ ಕಾರ್ಯಕ್ಕೆ ಮಾತ್ರ ಸೀಮಿತವಾಗಿದ್ದ ಮಹಿಳೆ, ಇಂದು ಪುರುಷರಿಗೆ ಸರಿಸಾಟಿಯಾಗಿ ಸ್ವಸಾಮರ್ಥ್ಯದಿಂದಲೇ ಲಿಂಗಸಮಾನತೆ ಸಾಧಿಸುವತ್ತ ದೃಢ ಹೆಜ್ಜೆಯಿಟ್ಟಿದ್ದಾಳೆ. ಹಿಂದೆಲ್ಲಾ ಗಂಡು ಹೇಳಿದ ಮಾತುಗಳಿಗೆ ತಲೆಯಾಡಿಸಿ ಅದು ಸರಿಯಿರಲಿ, ತಪ್ಪಿರಲಿ ಅದನ್ನು ಚಾಚೂ ತಪ್ಪದೆ ಪಾಲಿಸುತ್ತಿದ್ದ ಹೆಣ್ಣು ಇಂದು ಅದನ್ನು ಪ್ರಶ್ನಿಸುವಂತಹ ಹಂತಕ್ಕೆ ತಲುಪಿದ್ದಾಳೆ. ಇದಕ್ಕೆ ಮುಖ್ಯ ಕಾರಣ, ಇಂದು ಮಹಿಳೆ ಸುಶಿಕ್ಷಿತಳಾಗಿದ್ದಾಳೆ. ಕೇವಲ ಮನೆಯ ಆಗುಹೋಗುಗಳಷ್ಟೇ ಅಲ್ಲ, ಹೊರ ಜಗತ್ತಿನ ಅರಿವು, ಸಂದರ್ಭವನ್ನು ನಿಭಾಯಿಸುವ ಶಕ್ತಿ, ವಹಿಸಿದ ಕಾರ್ಯವನ್ನು ಪ್ರಾಮಾಣಿಕವಾಗಿ ಅಚ್ಚುಕಟ್ಟಾಗಿ ನಿಭಾಯಿಸುವ ಚಾಣಾಕ್ಷತೆ, ಜಾಣ್ಮೆ ಅವಳಲ್ಲಿದೆ. ಈ ಅಂಶಗಳು ಆಕೆಯ ರಕ್ತದಲ್ಲೇ ಕರಗತವಾಗಿದೆಯಾದರೂ







ಅದನ್ನು ಮುಕ್ತವಾಗಿ ಬಹಿರಂಗಪಡಿಸಲು ಈ ಸಮಾಜ ಆಕೆಗೆ ಹಿಂದೆದೂ ಅವಕಾಶವನ್ನೇ ನೀಡಿರಲಿಲ್ಲವೇನೋ? ಅದಕ್ಕಾಗಿಯೇ ಇಂದು ಬಹುತೇಕ ಕ್ಷೇತ್ರಗಳಲ್ಲಿ ಮಹಿಳೆಯರಿಗೇ ಹೆಚ್ಚಿನ ಆದ್ಯತೆ!
ಆದರೆ ‘ಆಧುನಿಕ ಮಹಿಳೆ’ ಎಂಬ ಹೆಗ್ಗಳಿಕೆಯೇನೋ ಇಂದಿನ ಮಹಿಳೆಗೆ ದೊರೆತಿದೆ. ಆದರೆ, ಅದರ ಹಿಂದೆ ಆಕೆ ಅದೆಷ್ಟು ನೋವನುಭವಿಸುತ್ತಾಳೆ ಎಂಬುದು ಹಲವರ ಅರಿವಿಗಿಲ್ಲ. ದುಡಿಯುವ, ತಿಂಗಳಾರಂಭದಲ್ಲಿ ಸಂಬಳ ಎಣಿಸುವ, ಗಂಡಸರಂತೆ ಆಫೀಸಿಗೆ ಹೋಗುವ ಸ್ವಾತಂತ್ರವಿದ್ದರೂ ಮನೆಯ ಕೆಲಸದ ಜತೆಗೆ ದುಡಿಮೆಯ ಕೆಲಸದ ಹೊರೆಯೂ ಆಕೆಯನ್ನು ಬಳಲಿ ಬೆಂಡಾಗಿಸುತ್ತಿದೆ. ಈ ಹಿಂದೆ ಮನೆಯ ಜವಾಬ್ದಾರಿಯನ್ನಷ್ಟೇ ಹೊರುತ್ತಿದ್ದ ಆಕೆಯ ಕಾರ್ಯ ದ್ವಿಗುಣಗೊಂಡಿದೆ. ಇವೆಲ್ಲದರೊಂದಿಗೆ ಹೋಗುವಾಗ, ಬರುವಾಗ ದಾರಿಯಲ್ಲಿನ ಕಿರುಕುಳ, ಗಂಡನ ಅನುಮಾನ, ಅತ್ತೆಯ ಕೊಂಕು ನುಡಿಗಳು, ಕಚೇರಿಗಳಲ್ಲಿ ಮೇಲಾಧಿಕಾರಿಗಳು, ಸಹೋದ್ಯೋಗಿಗಳ ಕಿರುಕುಳವೂ ಆಕೆಯನ್ನು ಬಾಧಿಸುತ್ತಿದೆ. ಒಬ್ಬ ಮಹಿಳಾ ಪ್ರತಿಭೆ ಚಿಗುರೊಡೆಯುತ್ತಿದೆ ಎಂದು ಕಾಣುತ್ತಿದಂತೆಯೇ ಅದನ್ನು ಹೊಸಕಿಹಾಕುವುದು ಹೇಗೆಂದು ಆಲೋಚಿಸುವ ಪಾತಕಿಗಳ ನಡುವೆ ಹೆಣ್ಣು ’ಆಧುನಿಕ ಮಹಿಳೆ, ಸ್ವತಂತ್ರ ಮಹಿಳೆ’ ಎಂಬ ಹೆಗ್ಗಳಿಕೆಗಷ್ಟೇ ಸೀಮಿತವಾಗಿದ್ದಾಳೆಯೇ ಹೊರತು ನೈಜಸ್ಥಿತಿಯಲ್ಲಿ ಆಕೆಯಿನ್ನೂ ಶೋಷಿತಳೇ.
ಸಮಾಜದ ಎಲ್ಲಾ ಕ್ಷೇತ್ರಗಳಲ್ಲೂ ಇಂದು ಮಹಿಳೆ ಮುಂದೆ ಬಂದಿದ್ದರೂ ಸಮಾಜ ಆಕೆಯನ್ನು ’ಅಸಮರ್ಥೆ’, ’ಪರಾವಲಂಬಿ’ ಎಂದೇ ಹೇಳುತ್ತದೆ. ಸ್ವಲ್ಪ ಹೆಚ್ಚಾಗಿ ಮಾತನಾಡಿದರೆ ’ಬಜಾರಿ’ ಎಂತಲೂ, ಅಂಜಿ ಅಳುಕು ನಡೆದರೆ ’ಅಳುಮುಂಜಿ’ ಎಂತಲೂ, ಪರಿಚಯಸ್ಥ ಪುರುಷನೊಂದಿಗೆ ಮಾತನಾಡಿದರೆ ’ಅಕ್ರಮ ಸಂಬಂಧ’ ಕಲ್ಪಿಸಿ ಮಾತನಾಡುವ ನೀಚ ಮನೋಭಾವ ಹೊಂದಿರುವ ಬಹುತೇಕರು ಒಂದು ಹೆಣ್ಣಿನ ವ್ಯಕ್ತಿತ್ವವನ್ನು ಹೇಗೆಲ್ಲಾ ಹೀಗಳೆಯಬಹುದೋ ಅಷ್ಟೆಲ್ಲಾ ಪ್ರಯತ್ನಗಳ ಮೂಲಕ ಆಕೆಯನ್ನು ಅಣಕಿಸುವುದು ನಿರಂತರವಾಗಿದೆ. ಅದನ್ನೆಲ್ಲಾ ಆಕೆ ಪ್ರತಿರೋಧಿಸಿದಳೋ, ಅವಳ ಮೇಲೆ ಲೈಂಗಿಕ ದೌರ್ಜನ್ಯವೋ, ಕೆಲಸದಿಂದ ವಜಾಗೊಳಿಸುವುದೋ ಅಥವಾ ಆಕೆಯ ವ್ಯಕ್ತಿತ್ವದ ತೇಜೋವಧೆಗೆ ಅಗತ್ಯವಾದ ಎಲ್ಲಾ ಕ್ರಮಗಳನ್ನೂ ಈ ಸೋಕಾಲ್ಡ್ ಎಜುಕೇಟೆಡ್ ಸಮಾಜ ನಿರ್ವಹಿಸುತ್ತದೆ. ಈ ಹಂತದಲ್ಲಿ ಇಂತಹ ನೀಚರ ಕೈಗೆ ಸಿಕ್ಕು ಬಲಿಯಾದ ಅದೆಷ್ಟೋ ಮಹಿಳೆಯರ ನಿದರ್ಶನಗಳಿವೆ.
ಈ ಎಲ್ಲದರ ಮಧ್ಯೆಯೂ ತನಗೆ ಒದಗಿರುವಷ್ಟು ಸ್ವಾತಂತ್ರ್ಯದಲ್ಲಿ ತನಗೆ ದೊರೆತಿರುವ ಅವಕಾಶವನ್ನು ಸದುಪಯೋಗಪಡಿಸಿಕೊಂಡು, ಸುತ್ತಲಿನ ವಾತಾವರಣವನ್ನು ಕಷ್ಟವೋ ಸುಖವೋ ಒಗ್ಗಿಸಿಕೊಂಡು ಅದೆಷ್ಟೋ ಮಹಿಳೆಯರು ಸ್ವಾಭಿಮಾನದಿಂದ ಬದುಕುತ್ತಿದ್ದಾರೆ. ಇಂತಹ ಅಲ್ಪಸಂಖ್ಯಾತರನ್ನು ಬಹುಸಂಖ್ಯಾತ ಮಹಿಳೆಯರು ಅನುಸರಿಸಬೇಕಿದೆ. ಹಾಗಿದ್ದಾಗ ಮಾತ್ರ ಸ್ತ್ರೀಸ್ವಾತಂತ್ರ್ಯಕ್ಕೆ ಹೆಚ್ಚಿನ ಶಕ್ತಿ, ಬಲ ಬರುತ್ತದೆ.
ಬನ್ನಿ, ಎಲ್ಲರೂ ಒಗ್ಗೂಡೋಣ, ನಾವು ಪುರುಷರಿಗೆ ಸಮಾನರಲ್ಲ, ಅವರಿಗಿಂತಲೂ ಹೆಚ್ಚು ಸಮರ್ಥರು ಎಂದು ಸಾಬೀತುಪಡಿಸೋಣ. ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಂದು ದೃಢ ನಿರ್ಧಾರ ಕೈಗೊಳ್ಳೋಣ. ಇದಕ್ಕೆ ಮಹಿಳೆಯರು ತಮ್ಮಲ್ಲಿರುವ ಆಂತರಿಕ ಶಕ್ತಿಯನ್ನು ಬಡಿದೆಬ್ಬಿಸಿ, ಕಾರ್ಯಶೀಲರಾಗಬೇಕಿದೆ ಅಷ್ಟೇ...!

# ಸುರಕ್ಷತಾ ಸಾಧನ ಇಲ್ಲದ ಸ್ಲೀಪರ್ ಕೋಚ್ ಬಸ್ಸುಗಳಿಗೆ ಎಫ್.ಸಿ ನವೀಕರಣ; ತುಮಕೂರು ಆರ್‌ಟಿಓ ಕಛೇರಿಗೆ ಆಯುಕ್ತರ ಭೇಟಿ

ತುಮಕೂರು: ಸ್ಲೀಪರ್ ಕೋಚ್ ಬಸ್ಸುಗಳನ್ನು ಪ್ರಯಾಣಿಕರ ರಕ್ಷಣೆಗೆ ಅಗತ್ಯವಾಗಿ ಅಳವಡಿಸಬೇಕಾಗಿರುವ ಸುರಕ್ಷತಾ ಸಾಧನಗಳನ್ನು ಅಳವಡಿಸದೆ ಇರುವ ವಾಹನಕ್ಕೆ ಎಫ್.ಸಿ ನವೀಕರಿಸಿರುವ ತುಮಕೂರು ಆರ್.ಟಿ.ಓ ಕಚೇರಿಯ ಕ್ರಮದ ಕುರಿತು ಸಾರ್ವಜನಿಕರಿಂದ ದೂರುಗಳ ಬಂದ ಹಿನ್ನೆಲೆಯಲ್ಲಿ ಸಾರಿಗೆ ಇಲಾಖೆ ಜಂಟಿ ಸಾರಿಗೆ ಆಯುಕ್ತರಾದ ಗಾಯಿತ್ರಿದೇವಿ ತುಮಕೂರು ಆರ್.ಟಿ.ಓಕಚೇರಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಈ ವೇಳೆ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಜಂಟಿ ಸಾರಿಗೆ ಆಯುಕ್ತರಾದ ಗಾಯಿತ್ರಿ ದೇವಿ, ತುಮಕೂರು ಜಿಲ್ಲೆಯ ಶಿರಾ ನಗರದ ನಿವಾಸಿ ಸೈಯದ್ ಜಿಲ್ಲಾನಿ ಅವರಿಗೆ ಸೇರಿದ ಕೆ.ಎ.22 ಬಿ.5235 ವಾಹನ 22 ಜುಲೈ–2012ರಲ್ಲಿ ಬೆಳಗಾವಿಯಲ್ಲಿ ನೊಂದಣಿಯಾಗಿದ್ದು, ಪ್ರಸ್ತುತ ತುಮಕೂರು ಆರ್.ಟಿ.ಓಗೆ ಸ್ಥಳಾಂತರಗೊಂಡು,17–02–2026 ಎಫ್.ಸಿ ನವೀಕರಣಗೊಂಡಿರುತ್ತದೆ. ಸದರಿ ವಾಹನದ ಎಫ್.ಸಿ. ನವೀಕರಣದ ವೇಳೆ ವಾಹನ ತಪಾಸಣಾ ಅಧಿಕಾರಿ ಪ್ರವಾಸಿ ಸಾರಿಗೆ ವಾಹನದಲ್ಲಿ ತೆಗೆದುಕೊಳ್ಳ ಬಹುದಾದ ಮುನ್ನಚ್ಚರಿಕೆ ಕ್ರಮಗಳನ್ನು ಕೈಗೊಂಡಿಲ್ಲ, ಅಲ್ಲದೆ 15 ವರ್ಷತುಂಬಲು ಕೇವಲ 6 ತಿಂಗಳು ಇರುವಾಗ ಒಂದು ವರ್ಷಕ್ಕೆ ಎಫ್.ಸಿ ನವೀಕರಿಸುವ ಮೂಲಕ ಕಾನೂನು ಉಲ್ಲಂಘನೆ ಮಾಡಲಾಗಿದೆ ಎಂಬ ದೂರುಗಳು ಬಂದ ಹಿನ್ನೆಲೆಯಲ್ಲಿ



ಪರಿಶೀಲನೆಗೆ ಆಗಮಿಸಿದ್ದೇನೆ. ಮಾನವ ಹಕ್ಕುಗಳ ಆಯೋಗದ ನಿರ್ದೇಶನದಂತೆ ಒಂದು ಸಾರಿಗೆ ವಾಹನದ ಎಫ್.ಸಿ. ನವೀಕರಿಸುವ ವೇಳೆ ವಾಹನದಲ್ಲಿ ಪ್ರಯಾಣಿಕ ರ ರಕ್ಷಣೆಗೆ ಅಗತ್ಯವಿರುವ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆಯೇ ಎಂಬುದನ್ನು ಪರಿಶೀಲಿ ಸುವುದು ಪ್ರತಿಆರ್.ಟಿ.ಓ ಅಧಿಕಾರಿಯ ಕರ್ತವ್ಯವಾಗಿದೆ. ಮೇಲ್ನೋಟಕ್ಕೆ ಈ ನಿಯಮ ಉಲ್ಲಂಘನೆಯಾಗಿರುವ ಸಾಧ್ಯತೆ ಕಂಡು ಬರುತ್ತಿದೆ. ಈ ಬಗ್ಗೆ ಹಿರಿಯ ಅಧಿಕಾರಿಗಳಿಗೆ ಸತ್ಯಾಸತ್ಯತೆ ಪರಿಶೀಲಿಸಿ, ಒಂದು ವೇಳೆ ವಾಹನ ಎಫ್.ಸಿ ನವೀಕರಿಸಿದ ಅಧಿಕಾರಿ ತಪ್ಪು ಮಾಡಿರುವುದು ಕಂಡು ಬಂದರೆ ಅವರ ವಿರುದ್ಧ ಶಿಸ್ತು ಕ್ರಮಕ್ಕೆ ಶಿಫಾರಸ್ಸು ಮಾಡಲಾಗುವುದು ಎಂದರು.

ತುಮಕೂರು ಆರ್.ಟಿ.ಓಕಚೇರಿಯಲ್ಲಿ ಕೆ.ಎ 22 ಬಿ.5235 ವಾಹನವನ್ನು ಪರಿಶೀಲಿಸಿದ್ದು, ವಾಹನದಲ್ಲಿ ನಾಲ್ಕು ತುರ್ತು ನಿರ್ಗಮನ ಬಾಗಿಲುಗಳು ಇರಬೇಕು.ಆದರೆಒಂದೇಇದೆ. ಅಲ್ಲದೆ ವಾಹನದ ಮೇಲ್ಭಾಗಕ್ಕೆ ಹೋಗಲು ಏಣಿಇದೆ.ಅಲ್ಲದೆ ಲಗೇಜ್ ಹಾಕಲು ಮೇಲ್ಭಾಗದಲ್ಲಿ ವ್ಯವಸ್ಥೆ ಮಾಡಲಾಗಿದೆ. ಇದು ಕಾನೂನು ಬಾಹಿರವಾಗಿದೆ. ಇದಲ್ಲದೆ ಹಲವಾರು ಸಣ್ಣ, ಪುಟ್ಟ ದೋಷಗಳಿವೆ.ಅದಾಗ್ಯೂ ಈ ವಾಹನದ ಎಫ್.ಸಿ ನವೀಕರಿಸಲಾಗಿದೆ. ಸದರಿಅಧಿಕಾರಿಯ ವಿರುದ್ಧ ಕಾನೂನು ಕ್ರಮಕ್ಕೆ ಶಿಫಾರಸ್ಸು ಮಾಡಲಾಗುವುದು ಎಂದು ಜಂಟಿ ಸಾರಿಗೆಆಯುಕ್ತರಾದಗಾಯಿತ್ರಿದೇವಿ ಸ್ಪಷ್ಟ ಪಡಿಸಿದರು.

ತುಮಕೂರು ಆರ್.ಟಿ.ಓಅಧಿಕಾರಿಎನ್.ಎಸ್ ಪ್ರಸಾದ್ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಪ್ರವಾಸಿ ವಾಹನಗಳು, ಅದರಲ್ಲಿಯೂ ಸ್ಲಿಪರ್ ಕೋಚ್ ವಾಹನಗಳಲ್ಲಿ ಬೆಂಕಿ ಅವಘಡಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಸರಕಾರ ಮುಂಜಾಗ್ರತಾ ಕ್ರಮವಾಗಿಎಲ್ಲಾ ಸ್ಲಿಪರ್ ಕೋಚ್ ಮತ್ತು ಇನ್ನಿತರ ಪ್ರವಾಸಿ ಸಾರಿಗೆ ವಾಹನಗಳಲ್ಲಿ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು 2026ರ ಫೆಬ್ರವರಿ




20ರವರೆಗೆ ಅವಕಾಶ ಕಲ್ಪಿಸಿದಲ್ಲದೆ, ಎಫ್.ಸಿ. ನವೀಕರಿಸುವ ವೇಳೆ ಅಧಿಕಾರಿಗಳು ಸೆಫ್ಟಿ ಮೆಜರ್ಸ್ ಬಗ್ಗೆ ಗಮನಹರಿಸಬೇಕು. ಒಂದು ವೇಳೆ ನಿಯಮ ಪಾಲಿಸದ ವಾಹನಗಳ ಎಫ.ಸಿ ಕ್ಯಾನ್ಸಲ್ ಮಾಡಿ, ಪರವಾನಗಿರದ್ದು ಪಡಿಸುವಂತೆ ಸರಕಾರದಿಂದ ಸುತ್ತೋಲೆ ಬಂದಿದೆ.ಸದರಿ ವಾಹನ ಕೆ.ಎ.22 ಬಿ. 5235 ವಾಹನದ ಎಫ್.ಸಿ.ಯನ್ನು ನಮ್ಮಆರ್.ಟಿ.ಓಕಚೇರಿಗೆ ಸೇರಿದ ಮಹಿಳಾ ಆರ್.ಟಿ.ಓಇನ್ಸ್‌ಪೆಕ್ಟರ್‌ಒಬ್ಬರು ವಾಹನವನ್ನು ಪರಿಶೀಲನೆಗೆ ಒಳಪಡಿಸಿ, ಎಫ್.ಸಿ ನವೀಕರಿಸಿದ್ದಾರೆ.ಈ ಬಗ್ಗೆ ಮೇಲಾಧಿಕಾರಿಗಳಿಗೆ ದೂರುಗಳು ಬಂದ ಹಿನ್ನೆಲೆಯಲ್ಲಿಇಂದು ಸಾರಿಗೆಇಲಾಖೆಯಜಂಟಿ ನಿರ್ದೇಶಕರು ನಮ್ಮಕಚೇರಿಗೆ ಆಗಮಿಸಿ, ಜಪ್ತಿ ಮಾಡಲಾಗಿದ್ದ ವಾಹನವನ್ನು ಪರಿಶೀಲನೆ ನಡೆಸಿದ್ದಾರೆ.ನವೀಕರಿಸುವ ವೇಳೆ ತಪ್ಪುಗಳು ಜರುಗಿದ್ದರೆ, ಅಂತಹ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮಕ್ಕೆ ಶಿಫಾರಸ್ಸು ಮಾಡಲಿದ್ದಾರೆಎಂದರು.

# ಶಾಲಾ ಮಕ್ಕಳಿಗೆ ನೋಟ್ ಪುಸ್ತಕ ವಿತರಣೆ ಮೂಲಕ ಕೆ.ಬಿ.ಸಿದ್ದಯ್ಯನವರ ಹುಟ್ಟು ಹಬ್ಬಆಚರಣೆ

ತುಮಕೂರು : ಕೆ.ಬಿ.ಸಿದ್ದಯ್ಯ ಪ್ರತಿಷ್ಠಾನ ವತಿಯಿಂದ ಕವಿ ದಿ॥ ಕೆ.ಬಿ.ಸಿದ್ದಯ್ಯನವರ 72ನೇ ಹುಟ್ಟು ಹಬ್ಬವನ್ನು ಉಪ್ಪಾರಹಳ್ಳಿ ಸರ್ಕಾರಿ ಪ್ರಾಥಮಿಕ ಶಾಲಾ ಮಕ್ಕಳಿಗೆ ನೋಟ್ ಪುಸ್ತಕ, ಪೆನ್ ವಿತರಿಸುವ ಮೂಲಕ ಆಚರಿಸಲಾಯಿತು.



ಕೆ.ಬಿ.ಸಿದ್ದಯ್ಯನವರ ಮೊಮ್ಮಗಳಾದ ಸಂಹಿತಾ.ಸಿ. ಈ ಸಂದರ್ಭದಲ್ಲಿ ಮಾತನಾಡಿ ನಮ್ಮತಾತತನವರು ಸಾಂಸ್ಕೃತಿಕ ಲೋಕಕ್ಕೆ ನೀಡಿದಕೊಡಿಗೆಯನ್ನುಅವರ ಹುಟ್ಟಿದ ದಿನದ ಅಂಗವಾಗಿ ಸರ್ಕಾರಿ ಶಾಲಾ ಮಕ್ಕಳಿಗೆ ನೋಟ್ ಪುಸ್ತಕ ವಿತರಿಸುವ ಮೂಲಕಅವರ ಹುಟ್ಟು ಹಬ್ಬಆಚರಣೆ ಮಾಡಲಾಗಿದೆ.

ನಮ್ಮತಾತನವರು ಪ್ರತಿಯೊಬ್ಬರಿಗೂಅಕ್ಷರವೆಂಬುದುದಕ್ಕಬೇಕೆಂದುಅವರಕಾವ್ಯದ ಮೂಲಕ ಹೇಳಿದ್ದಾರೆ, ಮುಟ್ಟಬಾರದವನಾದ ನಾನು ಅಕ್ಷರವನ್ನು ಮುಟ್ಟಿ ಬಿಟ್ಟೆಎಂದುಅವರೇ ಹೇಳಿದ್ದಾರೆ, ಇಂದಿಗೂ ಬಡ ಮಕ್ಕಳು ಅಕ್ಷರಕಲಿಯಲುಅವರ ಬಡತನಕಾಡುತ್ತಿದ್ದು, ನಮ್ಮತಾತನವರುಅಕ್ಷರಎಲ್ಲರೂಕಲಿಯಬೇಕೆಂಬ ಒತ್ತಾಸೆಈಡೇರಲಿ ಎಂದುಇಂದು ಸರ್ಕಾರಿ ಶಾಲಾ ಮಕ್ಕಳಿಗೆ ನೋಟ್ ಪುಸ್ತಕ, ಲೇಖನ ಸಾಮಗ್ರಿಗಳನ್ನು ವಿತರಿಸಿದ್ದೇವೆ ಎಂದರು.

ಈ ಸಂದರ್ಭದಲ್ಲಿ ಕೆ.ಬಿ.ಸಿದ್ದಯ್ಯನವರ ಮಗಳಾದ ಪಲ್ಲವಿ, ಡಾ॥ಚನ್ನಂಜಪ್ಪ, ವಿರೂಪಾಕ್ಷ ಡ್ಯಾಗೇರಹಳ್ಳಿ ಮತ್ತು ಶಾಲಾ ಶಿಕ್ಷಕರುಗಳು ಉಪಸ್ಥಿತರಿದ್ದರು.

# ಸಹಕಾರಿ ಕ್ಷೇತ್ರ ಗ್ರಾಮೀಣ ಪ್ರದೇಶದ ಜನಸಾಮಾನ್ಯರ ಆರ್ಥಿಕ ಸುಭದ್ರತೆ ನೀಡುವ ಜೀವನಾಡಿ

ಶಿರಾ : ತಾಲ್ಲೂಕಿನ ಪ್ರತಿಷ್ಠಿತ ಶ್ರೀ ಕನಕ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಬಿ. ಕೆ. ಮಂಜುನಾಥ್, ಉಪಾಧ್ಯಕ್ಷರಾಗಿ ಕಡೇ ಮನೆ ರವಿಕುಮಾರ್ ಅವಿರೋಧವಾಗಿ ಆಯ್ಕೆಯಾದರು.

ಶಿರಾ ನಗರದ ಶ್ರೀ ಕನಕ ಪತ್ತಿನ ಸಹಕಾರ ಸಂಘದ ಕಚೇರಿಯಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದ ನೂತನ ಅಧ್ಯಕ್ಷ ಬಿ.ಕೆ. ಮಂಜುನಾಥ್, ಯಾವುದೇ ಗ್ರಾಮ, ಹಳ್ಳಿಯಾಗಲಿ ಅಭಿವೃದ್ಧಿಹೊಂದುವಲ್ಲಿ ಮುಖ್ಯ ಪತ್ರ ವಹಿಸುವುದು ಸಹಕಾರಿ ಕ್ಷೇತ್ರ, ಬಡ ಜನರಿಗೆ ತಮ್ಮ ಕಷ್ಟದ ಸಮಯಗಳಲ್ಲಿ ತ್ವರಿತಗತಿಯಲ್ಲಿ ಸಾಲ ಸೌಲಭ್ಯ ನೀಡುವಲ್ಲಿ ಸಹಕಾರಿ ಕ್ಷೇತ್ರದ ಸಂಘಗಳ ಪತ್ರ ಮಹತ್ವವದ್ದು, ಕೆಲ ದಶಕಗಳ ಹಿಂದೇ ದಿವಂಗತ ಎಸ್. ಕೆ. ದಾಸಪ್ಪನವರು ಹಾಗೂ ಅನುಯಾಯಿಗಳು ಜೊತೆಗೂಡಿ ಈ ಸಂಘವನ್ನು ಸ್ಥಾಪಿಸಿ ಇಂದು ಬೃಹತ್ ಮಟ್ಟದಲ್ಲಿ ಬೆಳೆದು ನಿಲ್ಲುವಲ್ಲಿ ಯಶಸ್ವಿಯಾಗಿದೆ, ನಮ್ಮ ಹಿರಿಯರ ಆಸಯದಂತೆ ಈ ಕನಕ ಪತ್ತಿನ ಸಹಕಾರ ಸಂಘವನ್ನು ಮುನ್ನಡೆಸುತ್ತ ನಾವೆಲ್ಲರೂ ಸಾಗೋಣ, ಎಲ್ಲರ ಸಹಕಾರದಿಂದ ಮಾತ್ರ ಸಹಕಾರಿ ಸಂಘಗಳ ಅಭಿವೃದ್ಧಿ ಸಾಧ್ಯ, ಸಹಕಾರಿ ಸಂಘಗಳು ಇರುವುದೇ ಬಡವರ ಕಲ್ಯಾಣಕ್ಕಾಗಿ, ನನನ್ನು ಗುರುತಿಸಿ



ಅವಿರೋಧವಾಗಿ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದ ಎಲ್ಲಾ ಸರ್ವ ನಿರ್ದೇಶಕರುಗಳಿಗೆ ತುಂಬು ಹೃದಯದ ಧನ್ಯವಾದ ಅರ್ಪಿಸಿದರು.

ಶ್ರೀ ಕನಕ ಪತ್ತಿನ ಸಹಕಾರ ಸಂಘ ನಿಯಮಿತ ಉಪಾಧ್ಯಕ್ಷರಾದ ಕಡೆಮನೆ ರವಿಕುಮಾರ್ ಮಾತನಾಡಿ, ಬಡ ಜನತೆಯ ಹಾಗೂ ನಿರ್ದೇಶಕರುಗಳು ನನ್ನ ಮೇಲೆ ನಂಬಿಕೆಯಿಟ್ಟು ಈ ಸ್ಥಾನ ನೀಡಿ ಗೌರವಿಸಿದ್ದೀರಿ, ನಿಮ್ಮ ಈ ನಂಬಿಕೆಗೆ ಗೌರವ ಪೂರವಕವಾಗಿ ನಡೆದುಕೊಂಡು, ಅಧ್ಯಕರ ಹಾಗೂ ನಿರ್ದೇಶಕುರುಗಳ ಮಾರ್ಗದರ್ಶನದಂತೆ ಸಂಘದ ಅಭಿವೃದ್ಧಿಗೆ ಹಾಗೂ ಬಡಜನತೆಯ ಶ್ರೇಯೋಭಿವೃದ್ಧಿಗೆ ಶ್ರಮಿಸಿಸುವುದಾಗಿ ತಿಳಿಸಿದರು.

ನಿರ್ದೇಶಕರುಗಳಾದ ಕನಕರಾಜ್ ವಿ.ಜಿ., ಬಿನ್ ಗುರುಮೂರ್ತಿ,ತ್ರೀವೇಣಿ, ದಿವ್ಯ ಕೆ.ಸಿ. ಪ್ರದೀಪ್, ಭಾನುಪ್ರಕಾಶ್ ಎಲ್., ಮಂಜುನಾಥ್ ಬಿ.ಕೆ., ರಂಗನಾಥ್ ಡಿ. ಬಿನ್. ಎಸ್.ಕೆ.ದಾಸಪ್ಪ, ರಂಗನಾಥ್ ಎಸ್.ಎಲ್., ರಾಘವೇಂದ್ರ ಹೆಚ್. ಎಂ. ಲಕ್ಷ್ಮಣ್ ಪಿ. ಎಲ್. (ಟೇಬಲ್) ಶಿವಶಂಕರ್ ಎಸ್.ಪಿ., ಸುರೇಶ್ ಹೆಚ್., ಸುಶೀಲ ವಿರೂಪಾಕ್ಷ ಸೇರಿದಂತೆ ಪ್ರಮುಖರು ಸಿಬ್ಬಂದಿ ವರ್ಗದವರು

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ

# ರೈತರು ಸಾವಯುವ ಕೃಷಿಯನ್ನು ಅಳವಡಿಸಿಕೊಂಡು ಆರ್ಥಿಕವಾಗಿ ಸದೃಢರಾಗಬೇಕು

ಮಧುಗಿರಿ.. ರೈತರು ಸಾವಯುವ ಕೃಷಿಯನ್ನು ಅಳವಡಿಸಿಕೊಂಡು ಆರ್ಥಿಕವಾಗಿ ಸದೃಢ ಆಗಬೇಕು ಹಾಗೂ ಜೇನು ಕೃಷಿಯನ್ನು ಕೈಗೊಳ್ಳಬೇಕು ಎಂದು ತಾಲೂಕು ಕೃಷಿಕ ಸಮಾಜದ ಅಧ್ಯಕ್ಷರಾದ ಗುಟ್ಟೆ ರಮೇಶ್ ತಿಳಿಸಿದ್ದಾರೆ ಅವರು ದೊಡ್ಡೇರಿ ಹೋಬಳಿ ಸಜ್ಜೆ ಹೊಸಹಳ್ಳಿ ಗ್ರಾಮದಲ್ಲಿ ತೋಟಗಾರಿಕೆ ಇಲಾಖೆ ವತಿಯಿಂದ ಏರ್ಪಡಿಸಿದ್ದ ಪರಂಪರಾಗತ ಕೃಷಿ ವಿಕಾಸ ಯೋಜನೆ ಅಡಿ ಸಾವಯುವ ಪರಿವರ್ತನೆ ಮತ್ತು ಜೇನು ಕೃಷಿ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ತೋಟಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕ ಶಶಿಧರ್ ಮಾತನಾಡಿ ಸಾವಯುವ ಕೃಷಿಯನ್ನು ನಮ್ಮ ಪೂರ್ವಜರ ಕಾಲದಿಂದ ಮಾಡುತ್ತಿದ್ದು ಮಣ್ಣಿಗೆ ಕೃಷಿ ತ್ಯಾಜ್ಯ ಮತ್ತು ಕೊಟ್ಟಿಗೆ ಗೊಬ್ಬರಗಳನ್ನು ಹೆಚ್ಚಾಗಿ ಬಳಸುವುದರಿಂದ ಸೂಕ್ಷ್ಮಾಣು ಜೀವಿಗಳ ಚಟುವಟಿಕೆ ಹೆಚ್ಚಾಗಿ ಎಚ್ಚ



ಹೆಚ್ಚಿನ ಆಮ್ಲಜನಕ ಸಿಗುವುದರಿಂದ ಉತ್ತಮ ಇಳುವರಿ ಪಡೆಯಬಹುದಾಗಿದೆ ಎಂದು ತಿಳಿಸಿದರು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಗಂಗಾಧರ್ ಮಾತನಾಡಿ ರೈತರಿಗೆ ಗೋಮೂತ್ರದ ಮೂತ್ರದ ಅನುಕೂಲದ ಬಗ್ಗೆ ಸಾವಯುವ ಗೊಬ್ಬರದ ಅನುಕೂಲ ಹಾಗೂ ರೈತರು ತಾವು ಬೆಳೆದ ಬೆಳೆಗಳನ್ನು ತಾವೇ ಮಾರುಕಟ್ಟೆ ಮಾಡಿ ಮಾರುಕಟ್ಟೆಗೆ ಹಾಕುವುದರಿಂದ ಉತ್ತಮ ಬೆಲೆ ಸಿಗುತ್ತದೆ ಎಂದು ತಿಳಿಸಿದರು ಉದ್ಯಮಿ ಕುರುಬರಹಳ್ಳಿ ಹರ್ಷ ಮಾತನಾಡಿ ಜೇನು ಕೃಷಿ ಸಂತತಿ ಹಾಳಾದರೆ ಮನುಕುಲವೇ ನಾಶವಾಗುತ್ತದೆ ಬೇವಿನ ಎಣ್ಣೆ ಬೆಳ್ಳುಳ್ಳಿ ಹೆಚ್ಚಾಗಿ ಬಳಸಿಕೊಳ್ಳಬೇಕು ಅದೇ ರೀತಿಯ ಸಾವಯುವ ಗೊಬ್ಬರವನ್ನು ಹೆಚ್ಚಾಗಿ ಬಳಸುವುದರಿಂದ ರೈತರು ಆರ್ಥಿಕವಾಗಿ ಸದೃಢವಾಗಬಹುದು

ಈ ಹಿನ್ನೆಲೆಯಲ್ಲಿ ಜೇನು ಕೃಷಿಯನ್ನು ಉಳಿಸಿಕೊಳ್ಳಬೇಕಾಗಿದೆ ಎಂದು ತಿಳಿಸಿದರು ಈ ಸಂದರ್ಭದಲ್ಲಿ ಮಾಜಿ ಜಿಲ್ಲಾ ಪಂಚಾಯತ್ ಸದಸ್ಯ ಚಿನ್ನಪ್ಪ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಲಿಂಗರಾಜು ತಿಮ್ಮರಾಜು ಶ್ರೀನಿವಾಸ್ ಮಹೇಶ್ ತೋಟಗಾರಿಕೆ ಇಲಾಖೆಯ ಅಧಿಕಾರಿಗಳಾದ ಸ್ವಾಮಿ ಶಂಕರ್ ನಾರಾಯಣ್ ಉದಯ್ ಕುಮಾರ್ ಬಸವರಾಜು ಮತ್ತು ಇತರರು ಹಾಜರಿದ್ದರು

# ರಾಷ್ಟ್ರ ರಾಜಕಾರಣಕ್ಕೆ ಜೆಡಿಯು ಅಧ್ಯಕ್ಷ ನಿತೀಶ್ ಕುಮಾರ್ ಎಂಟ್ರಿ: ರಾಜ್ಯಸಭಾ ಸ್ಥಾನಕ್ಕೆ ಸ್ಪರ್ಧೆ

ತುಮಕೂರು: ಜೆಡಿಯು ರಾಷ್ಟ್ರೀಯ ಅಧ್ಯಕ್ಷರಾಗಿರುವ ನಿತೀಶ್ ಕುಮಾರ್ ಅವರು ರಾಜ್ಯಸಭಾ ಸ್ಥಾನಕ್ಕೆ ಸ್ಪರ್ಧಿಸುವ ಮೂಲಕ ರಾಷ್ಟ್ರ ರಾಜಕಾರಣಕ್ಕೆ ಅಡಿ ಇಡುತ್ತಿರುವುದು ಸಂತೋಷದ ವಿಚಾರವಾಗಿದೆ ಎಂದು ಜೆಡಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಆರ್.ರಂಗನಾಥ್ ಹಾಗೂ ಯುವಘಟಕದರಾಜ್ಯ ಕಾರ್ಯದರ್ಶಿ ಹೇಮಂತಕುಮಾರ್ ತಿಳಿಸಿದ್ದಾರೆ.

ಖಾಸಗಿ ಹೊಟೇಲ್‌ನಲ್ಲಿ ನಡೆದ ಜೆಡಿಯು ಪಕ್ಷದ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ಬಿಹಾರದಿಂದ ರಾಜ್ಯ ಸಭೆಗೆ ಬಿಹಾರ ಮುಖ್ಯ ಮಂತ್ರಿಯಾಗಿರುವ ನಿತೀಶಕುಮಾರ್ ಸ್ಪರ್ಧಿಸಲು ತಮ್ಮ ಉಮೇದುವಾರಿಕೆ ಸಲ್ಲಿಸಿದ್ದಾರೆ.ಹಾಗೆಯೇ ದಾವಣಗೆರೆದಕ್ಷಿಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಜೆಡಿಯು ರಾಜ್ಯಾಧ್ಯಕ್ಷರಾಗಿರುವ ಮಹಿಮ ಜೆ.ಪಟೇಲ್‌ಅವರು ಸ್ಪರ್ಧಿಸುವುದು ಬಹುತೇಕ ಖಚಿತವಾಗಿದ್ದು, ಇವರಿಬ್ಬರ ಗೆಲುವಿಗೆ ಜೆಡಿಯು ಕಾರ್ಯಕರ್ತರುಶ್ರಮಿ ಮೀರಿಶ್ರಮಿಸುವುದಾಗಿ ತಿಳಿಸಿದ್ದಾರೆ.



ಮುಂಬರುವ ಆಗ್ನೇಯ ಪದವಿಧರರ ಕ್ಷೇತ್ರದಿಂದ ಜೆಡಿಯು ರಾಜ್ಯ ಯುವ ಘಟಕದ ಅಧ್ಯಕ್ಷರಾದ ಡಾ. ಕೆ. ನಾಗರಾಜು ಅವರು ಎನ್.ಡಿ.ಎ ಬೆಂಬಲಿತ ಅಭ್ಯರ್ಥಿಯಾಗಿ ಸ್ಪರ್ಧಿಸಲಿದ್ದು, ಯುವಕರ ಹಾಗೂ ಪದವೀಧರರ ಸಮಸ್ಯೆಗಳಿಗೆ ಪರಿಹಾರಕಂಡುಹಿಡಿಯುವ ನಿಟ್ಟಿನಲ್ಲಿ

ದೇಶದ ರಾಜಕೀಯದಲ್ಲಿ ಜೆಡಿಯು ಪಕ್ಷವು ಮಹತ್ವದ ಪಾತ್ರ ವಹಿಸುತ್ತಿದ್ದು, ನಿತೀಶ್‌ಕುಮಾರ್‌ಅವರಅನುಭವ ಮತ್ತು ನಾಯಕತ್ವ ದೇಶದ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಜೆಡಿಯು ರಾಜ್ಯಾಧ್ಯಕ್ಷರಾದ ಮಹಿಮಾಜೆ. ಪಟೇಲ್ ಅವರುಕ್ಷೇತ್ರದಅಭಿವೃದ್ಧಿ ಹಾಗೂ ಜನ ಸೇವೆಯ ಉದ್ದೇಶದಿಂದ ದಾವಣಗೆರೆ ದಕ್ಷಿಣ ವಿಧಾನಸಭಾಕ್ಷೇತ್ರದಿಂದ ಸ್ಪರ್ಧಿಸಲು ಜೆಡಿಯು ಕಾರ್ಯಕರ್ತರು ಮುಖಂಡರುಗಳು ಹಾಗೂ ಎನ್ ದಿ ಎ ಮಿತ್ರ ಪಕ್ಷಗಳ ಮುಖಂಡರುಗಳು ಅಭಿಪ್ರಾಯ ಬೆಂಬಲಿಸುತ್ತಿದ್ದು, ಇದು ಮಹಿಮ ಜೆ.ಪಟೇಲ್‌ರ ಗೆಲುವಿಗೆ ಸಹಕಾರಿಯಾಗಲಿದೆಎಂದರು.

ಕಾರ್ಯನಿರ್ವಹಿಸಲಿದ್ದಾರೆ.ಜೆಡಿಯು ಪಕ್ಷದ ಎಲ್ಲಾ ಕಾರ್ಯಕರ್ತರು ಹಾಗೂ ಯುವ ಘಟಕದ ಸದಸ್ಯರು ಒಗ್ಗಟ್ಟಿನಿಂದ ಕೆಲಸ ಮಾಡಿ ಈ ಅಭ್ಯರ್ಥಿಗಳ ಗೆಲುವಿಗಾಗಿ ಶ್ರಮಿಸುವುದಾಗಿ, ಜೆಡಿಯು ರಾಜ್ಯ ಪ್ರದಾನ ಕಾರ್ಯದಶಿಗಳಾದ ರಂಗನಾಥ್‌ಕೆ.ಆರ್. ಹಾಗೂ ಜೆಡಿಯು ಯುವ ಘಟಕದ ರಾಜ್ಯ ಕಾರ್ಯದರ್ಶಿಗಳಾದ ಹೇಮಂತ್ ಕುಮಾರ್‌ಎನ್.ಎಸ್. ತಿಳಿಸಿದರು.

ಈ ಸಂದರ್ಭದಲ್ಲಿ ಪರಮೇಶ್ ಸಿಂದಗಿರವರು, ಬಸವಣ್ಣ ಕುದೂರ್, ಹಿರಿಯರಾದ ಮಂಜುನಾಥ್,ನರಸಿಂಹ ಮೂರ್ತಿ,ರತ್ನಕರ್‌ರವರು ಸಭೆಯಲ್ಲಿ ಪಾಲ್ಗೊಂಡಿದ್ದರು.

# ಮಹಿಳೆಯು ಕುಟುಂಬದ ಆಧಾರ ಸ್ತಂಭ

ತುಮಕೂರು: ಮಹಿಳೆಯು ಕುಟುಂಬದ ಆಧಾರ ಸ್ತಂಭ. ಆಕೆಯ ಆರೋಗ್ಯ ಇಡೀ ಕುಟುಂಬದ ಆರೋಗ್ಯಕ್ಕೆ ಸಮಾನ ಎಂದು ವೈದ್ಯಕೀಯ ಸೇವೆಗಳ ಕಾರ್ಯದರ್ಶಿಗಳಾದ ಟಿ.ಎಂ. ಸ್ವಾಮಿ ತಿಳಿಸಿದರು.



ಅವರು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ವಿಶೇಷ ಸಂದರ್ಭದಲ್ಲಿ ಸಿದ್ಧಗಂಗಾ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯು, ದಿ ಅಸೋಸಿಯೇಷನ್ ಆಫ್ ಸರ್ಜನ್ಸ್ ಆಫ್ ಇಂಡಿಯಾ ಸಹಯೋಗದೊಂದಿಗೆ ಮಹಿಳೆಯರಿಗಾಗಿ ನಡೆದ ಬೃಹತ್ 'ಉಚಿತ ಶಸ್ತ್ರಚಿಕಿತ್ಸಾ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಗೌರವಾರ್ಥವಾಗಿ, ಆರ್ಥಿಕವಾಗಿ ಹಿಂದುಳಿದ ಮಹಿಳೆಯರಿಗೆ ಉತ್ತಮ ಗುಣಮಟ್ಟದ ಶಸ್ತ್ರಚಿಕಿತ್ಸಾ ಸೇವೆಗಳನ್ನು ಒದಗಿಸುವುದು ನಮ್ಮ ಸಂಸ್ಥೆಯ ಮುಖ್ಯ ಉದ್ದೇಶವಾಗಿದೆ. ಈ ಶಿಬಿರವು ಕೇವಲ ತಪಾಸಣೆಗೆ ಸೀಮಿತವಾಗದೆ, ಅಗತ್ಯವಿರುವವರಿಗೆ ಶಸ್ತ್ರಚಿಕಿತ್ಸೆಯ ಸೌಲಭ್ಯವನ್ನೂ ಒಳಗೊಂಡಿರುವುದು ವಿಶೇಷ ಎಂದರು.

ಪ್ರಾಚಾರ್ಯರಾದ ಡಾ. ಶಾಲಿನಿ ಎಂ ಮಾತನಾಡಿ ವೈದ್ಯಕೀಯ ಶಿಕ್ಷಣ ಸಂಸ್ಥೆಯಾಗಿ ನಾವು ಸಮಾಜದ ಬಗ್ಗೆ ಹೊಂದಿರುವ ಜವಾಬ್ದಾರಿಯ ಭಾಗವಾಗಿ ಈ ಕಾರ್ಯಕ್ರಮ ರೂಪಿಸಿದ್ದೇವೆ. ಈ ಶಿಬಿರದಲ್ಲಿ ಅನುಭವೀ ತಜ್ಞವೈದ್ಯರ ತಂಡವು ಭಾಗವಹಿಸುತ್ತಿದ್ದು, ಆಯ್ದ 'ಜನರಲ್ ಸರ್ಜರಿ' ಮತ್ತು 'ಸ್ತ್ರೀರೋಗ' ವಿಭಾಗದ ಸಮಸ್ಯೆಗಳಿಗೆ ಸೂಕ್ತ ಚಿಕಿತ್ಸೆ ನೀಡಲಾಗುವುದು. ಮಹಿಳೆಯರು ತಮ್ಮ ಆರೋಗ್ಯದ ಸಮಸ್ಯೆಗಳನ್ನು ಮುಚ್ಚಿಡದೆ ಈ ಶಿಬಿರದ ಸದುಪಯೋಗ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ನಿರ್ದೇಶಕರಾದ ಡಾ. ಎಸ್. ಪರಮೇಶ್ ಮಾತನಾಡಿ ಪ್ರತಿ ಮನೆಯೂ ಆರೋಗ್ಯವಂತ ಮನೆಯಾಗಬೇಕು ಎನ್ನುವ ಉದ್ದೇಶದಿಂದ ಸಿದ್ಧಗಂಗಾ ಆಸ್ಪತ್ರೆಯಲ್ಲಿ ಆಧುನಿಕ ಸೌಲಭ್ಯಗಳೊಂದಿಗೆ ಈ ಶಿಬಿರ ನಡೆಯುತ್ತಿದೆ. ತಜ್ಞವೈದ್ಯರಿಂದ ತಪಾಸಣೆ, ಸಲಹೆ, ಆಸ್ಪತ್ರೆಯ ಹಾಸಿಗೆ ಸೌಲಭ್ಯ ಹಾಗೂ ನರ್ಸಿಂಗ್ ಸೇವೆಗಳನ್ನು ಸಂಪೂರ್ಣ ಉಚಿತವಾಗಿ ನೀಡಲಾಗುತ್ತಿದ್ದು ಈಗಾಗಲೇ ಉಚಿತ ಆರೋಗ್ಯ ಸೇವೆ ನೀಡುತ್ತಿರುವ ನಮಗೆ ಈ ಶಿಬಿರ ಮತ್ತಷ್ಟು ಮಹಿಳೆಯರಿಗೆ ಆರೋಗ್ಯ ಕಾಪಾಡಲಿದೆ ಎಂದರು. ಕಾರ್ಯಕ್ರಮದಲ್ಲಿ ವೈದ್ಯಕೀಯ ಅಧೀಕ್ಷಕ ಡಾ. ನಿರಂಜನ ಮೂರ್ತಿ ಬಿ, ಜನರಲ್ ಸರ್ಜರಿ ವಿಭಾಗದ ಮುಖ್ಯಸ್ಥರಾದ ಡಾ. ಚಂದ್ರಶೇಖರ್, ಸ್ತ್ರೀರೋಗ ವಿಭಾಗದ ಡಾ. ಹೇಮಾ, ಅನಾಸ್ಥೆಸಿಯಾ ವಿಭಾಗದ ಡಾ.ಶಶಿಕಿರಣ್ ಹಾಗೂ ವೈದ್ಯಕೀಯ ಕಾಲೇಜಿನ ಉಪನ್ಯಾಸಕರು ಹಾಗೂ ಸಿಬ್ಬಂದಿ ಮುಂತಾದವರಿದ್ದರು.

# ಮಾದಕ ವಸ್ತು ಗಾಂಜಾ ಸೊಪ್ಪು ಮಾರಾಟ ಮಾಡುತ್ತಿದ್ದ ಆರೋಪಿಗೆ ಶಿಕ್ಷೆ

ತುಮಕೂರು :ದಿನಾಂಕ:23–03–2021 ರಂದು ಚಿನ್ನರಾಮಾಂಜಿ 4 ರಾಮಾಂಜಿ ಬಿನ್ ಲೇಟ್ ನಾರಾಯಣಪ್ಪ, 34 ವರ್ಷ, ಬೋವಿ ಕಾಲೋನಿ, ಕೊರಟಗೆರೆ ಟೌನ್, ತುಮಕೂರು ಜಿಲ್ಲೆ ಈತನು ಯಲ್ಲಾಪುರದ ಬಾಲಾಜಿ ಲೇ ಔಟ್ ಹತ್ತಿರ ತನ್ನ ವಶದಲ್ಲಿ ಮಾದಕ ವಸ್ತು ಗಾಂಜಾವನ್ನು ಹೊಂದಿರುವ ಬಗ್ಗೆ ಆಯೂಬ್ ಜಾನ್ ಹೆಚ್.ಸಿ 379 ರವರು ದೂರು ನೀಡಿ ಮೊ.ನಂ 52/2021 ಕಲಂ 20(ಬಿ) **NDPS ACT** ಅಡಿಯಲ್ಲಿ ಪ್ರಕರಣ ದಾಖಲಿಸಿದ್ದು ಶಮೀನ್, ಪಿ.ಎಸ್.ಐ ರವರು ಪ್ರಕರಣ ದಾಖಲಿಸಿಕೊಂಡು ಆರೋಪಿ–1 ಚಿನ್ನರಾಮಾಂಜಿ ರಾಮಾಂಜಿ ರವರ ವಶದಿಂದ 913 ಗ್ರಾಂ ತೂಕದ ಕಡ್ಡಿ ಬೀಜ ಮಿಶ್ರಿತ ಒಣಗಿದ ಗಾಂಜಾವನ್ನು ಅಮಾನತ್ತು ಪಡಿಸಿಕೊಂಡಿದ್ದು ಇದೇ ಪ್ರಕರಣದಲ್ಲಿ ಮೊದಲನೇ ಆರೋಪಿಗೆ ಗಾಂಜಾ ಪೂರೈಕೆ ಮಾಡುತ್ತಿದ್ದ ಆರೋಪಿ–2 ಬಾಗೇಪಲ್ಲಿ ತಾಲ್ಲೋಕ್, ಮಿಟ್ಟೆಮರಿ ಹೋಬಳಿ, ಪೋಲನಾಯಕನಹಳ್ಳಿ ಗ್ರಾಮದ ವಾಸಿಯಾದ ದೇವಮ್ಮ ದೇವಿ ಬಿನ್ ವೆಂಕಟರಮಣಪ್ಪ ರವರನ್ನು ದಸ್ತಗಿರಿ ಮಾಡಿ ಅವರ ವಶದಲ್ಲಿ ಇದ್ದ ॥ ಕೆಜಿ 162 ಗ್ರಾಂ ತೂಕದ ಕಡ್ಡಿ ಬೀಜ ಮಿಶ್ರಿತ ಒಣಗಿದ ಗಾಂಜಾವನ್ನು ಅಮಾನತ್ತು



ಪಡಿಸಿಕೊಂಡಿದ್ದು ಇಬ್ಬರು ಆರೋಪಿಗಳು ಹಣಕ್ಕಾಗಿ ಅಕ್ರಮವಾಗಿ ಸಾರ್ವಜನಿಕರಿಗೆ ಗಾಂಜಾ ಮಾರಾಟ ಮಾಡಿರುವುದು ತನಿಖೆಯಿಂದ ದೃಢಪಟ್ಟ ಮೇರೆಗೆ ತನಿಖಾಧಿಕಾರಿಗಳಾದ ಶಮೀನ್. ಪಿ.ಎಸ್.ಐ ರವರು ತನಿಖೆ ಪೂರೈಸಿ ಇಬ್ಬರು ಆರೋಪಿಗಳ ವಿರುದ್ಧ ಕಲು 20(ಬಿ) ಓಆಕಖ ೦ಅಖ ಆಡಿಯಲ್ಲಿ ನ್ಯಾಯಾಲಯಕ್ಕೆ ದೋಷಾರೋಪಣ ಪತ್ರ ಸಲ್ಲಿಸಿಕೊಂಡಿರುತ್ತಾರೆ.

ಪ್ರಕರಣವು ಪ್ರಧಾನ ಜಿಲ್ಲಾ & ಸತ್ರ ನ್ಯಾಯಾಲಯದಲ್ಲಿ ಖಕಐ ಅ 189/2021ರಲ್ಲಿ ವಿಚಾರಣೆ ನಡೆದು ದಿನಾಂಕ:27–02–2026 ರಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಮಾನ್ಯ ನ್ಯಾಯಾಧೀಶರಾದ ಶ್ರೀಯುತ ಬಿ.ಜಯಂತ್ ಕುಮಾರ್ ರವರು 1ನೇ ಆರೋಪಿಯಾದ ಚಿನ್ನರಾಮಾಂಜಿ : ರಾಮಾಂಜಿ ಬಿನ್ ಲೇಟ್ ನಾರಾಯಣಪ್ಪ, 34 ವರ್ಷ, ಬೋವಿ ಕಾಲೋನಿ, ಕೊರಟಗೆರೆ ಟೌನ್, ತುಮಕೂರು ಜಿಲ್ಲೆ ಈತನಿಗೆ 1 ವರ್ಷ ಕಠಿಣ ಕಾರಾಗೃಹ ವಾಸ ಹಾಗೂ 5000/–ರೂ ದಂಡ, ದಂಡ ಕಟ್ಟಲು ತಪ್ಪಿದ್ದಲ್ಲಿ 1 ತಿಂಗಳ ಕಠಿಣ ಕಾರಾಗೃಹ ವಾಸ ಹಾಗೂ 2ನೇ ಆರೋಪಿಯಾದ ದೇವಮ್ಮ (@) ದೇವಿ ಬಿನ್ ವೆಂಕಟರಮಣಪ್ಪ, ಪೋಲನಾಯಕನಹಳ್ಳಿ ಗ್ರಾಮ, ಮಿಟ್ಟೆಮರಿ ಹೋಬಳಿ, ಬಾಗೇಪಲ್ಲಿ ತಾಲ್ಲೋಕ್, ಕೋಲಾರ ಜಿಲ್ಲೆ ರವರಿಗೆ 3 ವರ್ಷಗಳ ಸಾದಾ ಸಜೆ ಹಾಗೂ 20,000/–ರೂ ದಂಡ, ದಂಡ ಕಟ್ಟಲು ತಪ್ಪಿದ್ದಲ್ಲಿ 4 ತಿಂಗಳ ಕಠಿಣ ಕಾರಾಗೃಹ ವಾಸ ಅನುಭವಿಸುವಂತೆ ಶಿಕ್ಷೆ ವಿಧಿಸಿ ತೀರ್ಪು ನೀಡಿರುತ್ತಾರೆ.

ಮೇಲ್ಕಂಡ ಪ್ರಕರಣದಲ್ಲಿ ಸರ್ಕಾರದ ಪರವಾಗಿ ಗೌರವಾನ್ವಿತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಸರ್ಕಾರಿ ಅಭಿಯೋಜಕರಾದ ಶ್ರೀಮತಿ ಟಿ.ಆರ್.ಅರುಣ ರವರು ಸರ್ಕಾರದ ಪರವಾಗಿ ವಾದವನ್ನು ಮಂಡಿಸಿದ್ದು ಸೈಬರ್ ಕ್ರೈಂ ಪೊಲೀಸ್ ಠಾಣೆಯ ನ್ಯಾಯಾಲಯದ ಕರ್ತವ್ಯದ ಸಿಬ್ಬಂದಿಯಾದ ರೇಷ್ಮಾ ರವರು ಅಭಿಯೋಜನಾ ಸಾಕ್ಷಿಗಳ ವಿಚಾರಣೆ ಸಮಯದಲ್ಲಿ ಹಾಜರಿದ್ದು ಸಹಕರಿಸಿರುತ್ತಾರೆ ಎಂದು ಜಿಲ್ಲಾ ಪೋಲಿಸ್ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

# ಅಕ್ಷಯ ತಾಂತ್ರಿಕ ಕಾಲೇಜಿನಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ

ತುಮಕೂರು: ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಮಾ.8 ರಂದು ಲಿಂಗಾಪುರದ ಅಕ್ಷಯ ತಾಂತ್ರಿಕ ಮಹಾ ವಿದ್ಯಾಲಯದ ಆವರಣದಲಿ ಮಾರ್ಚ್08 ರಂದು ಕ್ರೀಡಾಕೂಟ ಮತ್ತು ಮಾರ್ಚ 09 ರಂದು ಸಾಂಸ್ಕೃತಿಕ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ ಎಂದು ಅಕ್ಷಯ ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ.ಯತೀಶ್ ತಿಳಿಸಿದ್ದಾರೆ.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,ಕೇಂದ್ರ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯ, ಮೈ ಭಾರತ್– ಮೇರಾಯುವ ಭಾರತ್ ತುಮಕೂರು, ಅಕ್ಷಯತಾಂತ್ರಿಕ ಮಹಾವಿದ್ಯಾಲಯಇವರ ಸಹಯೋಗದಲ್ಲಿ ವಿವಿಧ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಕೇಂದ್ರ ಸರಕಾರದ ಖೇಲೋ ಇಂಡಿಯಾ ಕ್ರೀಡಾಕೂಟದ ಅಂಗವಾಗಿ ಕರ್ನಾಟಕದ 6 ಜಿಲ್ಲೆಗಳಲ್ಲಿ ಈ ಕ್ರೀಡಾಕೂಟ ನಡೆಯುತ್ತಿದ್ದು, ಇದರಲ್ಲಿ ತುಮಕೂರು ಸಹ ಒಂದಾಗಿದೆಎಂದು ವಿವರಿಸಿದರು.

ಮಹಿಳೆಯರಲ್ಲಿ ಕ್ರೀಡಾ ಮನೋಭಾವನೆಯನ್ನು ಉದ್ದೀಪನಗೊಳಿಸುವಸಲುವಾಗಿಕೇಂದ್ರಯುವವ್ಯವಹಾರ ಹಾಗೂ ಕ್ರೀಡಾ ಸಚಿವಾಲಯದ ಸಹಕಾರದಿಂದ ಈ ಕ್ರೀಡಾಕೂಟವನ್ನುಆಯೋಜಿಸಲಾಗಿದೆ. ಕ್ರೀಡಾಕೂಟದಲ್ಲಿ 13 ವರ್ಷದಿಂದ 18 ವರ್ಷಗಳವರೆಗಿನ ಒಂದು ವಿಭಾಗ, ವೈಯಕ್ತಿಕ ವಿಭಾಗದಲ್ಲಿಅಥ್ಲೆಟಿಕ್ 100 ಮೀ., 200 ಮೀ., 400 ಮೀ ಓಟದ ಸ್ಪರ್ಧೆಗಳಿವೆ. 18 ವರ್ಷ ಮೇಲ್ಪಟ್ಟ 16 ಜನರನ್ನೊಳಗೊಂಡ ತಂಡಗಳಿಗೆ ಥ್ರೋಬಾಲ್, 18 ವರ್ಷ ಮೇಲ್ಪಟ್ಟ 8 ಜನರ ತಂಡಗಳಿಗೆ ಹಗ್ಗ ಜಗ್ಗಾಟ ಸ್ಪರ್ಧೆ, ವೈಯಕ್ತಿಕ ವಿಭಾಗದಲ್ಲಿ ಸ್ಲೋ ರೇಸ್, 18ರಿಂದ 25 ವರ್ಷದವರೆಗೆ ವೈಯಕ್ತಿಕ ವಿಭಾಗದಲ್ಲಿ ಭಾರತೀಯ ಮತ್ತು ಪಾಶ್ಚಿಮಾತ್ಯ ಸಮ್ಮಿಲನ ಫ್ಯಾಷನ್ ಶೋ, 20 ರಿಂದ 40 ವರ್ಷದವರೆಗೆ ವೈಯುಕ್ತಿಕ ವಿಭಾಗದಲ್ಲಿಐತಿಹಾಸಿಕ ರಾಣಿಯರುಕುರಿತು ಫ್ಯಾಷನ್ ಶೋ ಸ್ಪರ್ಧೆಗಳನ್ನು ಆಯೋಜಿಸಲಾಗಿದೆಎಂದರು.

ವಿಜೇತರಿಗೆಕ್ರಮವಾಗಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಬಹುಮಾನಗಳನ್ನು ಮತ್ತು ಪ್ರಶಸ್ತಿ ಪತ್ರಗಳನ್ನು ಮಾರ್ಚ 09 ರಂದು ನಡೆಯುವಕಾರ್ಯಕ್ರಮದಲ್ಲಿಒ ನೀಡ ಲಾಗುವುದು.ಭಾಗವಹಿಸುವವರು ಮುಂಚಿತವಾಗಿಯೇ ನೋಂದಣಿ ಮಾಡಿಕೊಳ್ಳಬಹುದು ಅಥವಾಅದೇ ದಿನ ಬೆಳಗ್ಗೆ 9.30ಕ್ಕೆ ಆಧಾರ್ ಕಾರ್ಡ್ ಅಥವಾದೃಢೀಕರಣ ಪತ್ರದೊಂದಿಗೆಅಕ್ಷಯಕಾಲೇಜುಕ್ರೀಡಾಂಗಣದಲ್ಲಿ ನೋಂದಣಿ ಮಾಡಿಕೊಳ್ಳಬಹುದು. ಈ ವಿವರಗಳಿಗಾಗಿ 9964285413 ಅಥವಾ 81051056555 ಇಲ್ಲಿಗೆ ಸಂಪರ್ಕಿಸಬಹುದುಎಂದರು.

ಮಾರ್ಚ್.09 ರಂದು ನಡೆಯುವ ಬಹುಮಾನ ವಿತರಣಾಕಾರ್ಯಕ್ರಮವನ್ನುನ್ಯಾಯಾಧೀಶರಾದ ನೂರು ನ್ನೀಸಾ ಉದ್ಘಾಟಿಸುವರು. ಜಿಲ್ಲಾಧಿಕಾರಿ ಶುಭಕಲ್ಯಾಣ್ ಅಧ್ಯಕ್ಷತೆ ವಹಿಸುವರು.ಆಹ್ವಾನಿತರಾಗಿ ಅಶ್ವಿಜ, ಬಿ.ಸಿ.ಶೈಲಾನಾಗರಾಜ್, ವಿಜಯಲಕ್ಷ್ಮಿ, ಡಾ.ಶಿವಕುಮಾರ್,ಚಂಪಕಮಾಲ ಮತ್ತಿತರರು ಭಾಗವಹಿಸುವರು.

ಪತ್ರಿಕಾ ಗೋಷ್ಠಿಯಲ್ಲಿ ಆರ್‌ಐಟಿವೈಡಿಸಿ ಅಧ್ಯಕ್ಷ ಜಿ.ವಿ.ವೀರೇಂದ್ರ ಪ್ರಸಾದ್, ನಾಗೇಂದ್ರಕುಮಾರ್, ಕಾಲೇಜು ಆಡಳಿತಾಧಿಕಾರಿ ಡಾ.ಚಂಪಕಮಾಲ, ಶಿವರಂಜನಿ, ಗೀತ ಶ್ರೀ ಹೇಮಂತ್‌ಕುಮಾರ್ ಉಪಸ್ಥಿತರಿದ್ದರು.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ

# ರಾಜಕಾರಣಿಗಳ ಇಚ್ಛಾಶಕ್ತಿಯ ಕೊರತೆಯಿಂದ ಹೇಮಾವತಿ ಯೋಜನೆ ನೆನೆಗುದಿಗೆ ಬಿದ್ದಿದೆ



ಚಿಕ್ಕನಾಯಕನಹಳ್ಳಿ : ಹೇಮಾವತಿ ಕಾಮಗಾರಿ ಕೆಲಸವನ್ನು ಗುತ್ತಿಗೆದಾರ ಇಷ್ಟೊಂದು ನಿಧಾನ ಗತಿಯಲ್ಲಿ ಮಾಡಿದರೆ ಇನ್ನೂ ಮೂರು ವರ್ಷವಾದರೂ ಕೆರೆಗಳಿಗೆ ನೀರು ಹರಿಯುವುದಿಲ್ಲ, ಅಧಿಕಾರ ಅನುಭವಿಸಿದ ರಾಜಕಾರಣಿಗಳ ಇಚ್ಛಾಶಕ್ತಿಯ ಕೊರತೆಯಿಂದ ಹೇಮಾವತಿ ಯೋಜನೆ ನೆನೆಗುದಿಗೆ ಬಿದ್ದಿದೆ ಎಂದು ಮಾಜಿ ಶಾಸಕ ಕಿರಣ್ ಕುಮಾರ್ ಬೇಸರ ವ್ಯಕ್ತಪಡಿಸಿದರು.

ಶನಿವಾರ ನೂರಾರು ರೈತರು ಹಾಗೂ ಕಾರ್ಯಕರ್ತರೊಂದಿಗೆ ಹೇಮಾವತಿ ಕಾಮಗಾರಿ ನಡೆಯುತ್ತಿರುವ ಗಡಬನಹಳ್ಳಿ, ಬಿಳಿಗೆರೆ, ತಿಮ್ಲಾಪುರ ಸಾಸಲು ದಬ್ಬೇಘಟ್ಟ, ಕಾಡೆನಹಳ್ಳಿ, ಕೊಡಲಾಗರ, ಸ್ಥಳಗಳಿಗೆ ಭೇಟಿ ನೀಡಿ ಮಾತನಾಡಿದ ಅವರು, 26 ಕೆರೆಗಳ ಹೇಮಾವತಿ ಕುಡಿಯುವ ನೀರಿನ ಯೋಜನೆಯ ಕಾಮಗಾರಿಯು ಅತ್ಯಂತ ನಿಧಾನಗತಿಯಲ್ಲಿ ಸಾಗುತ್ತಿದ್ದು, ಅನುಷ್ಠಾನಕ್ಕೆ ಬಂದ ಯೋಜನೆಯನ್ನು ಪೂರ್ಣಗೊಳಿಸಲು 16 ವರ್ಷಗಳು ಬೇಕಾ, ಚುನಾವಣೆಯಲ್ಲಿ ಸೋತರು ನಾನು ಈ ಯೋಜನೆಗೆ 103 ಕೋಟಿ ಹಣ ಬಿಡುಗಡೆಗೊಳಿಸಿದ್ದೆ, ಇಷ್ಟು ವರ್ಷ ಕಳೆದರೂ ಅರ್ಧ ಭಾಗವು ಈ ಯೋಜನೆ ಪೂರ್ಣಗೊಂಡಿಲ್ಲ, ರೈತರು ಬೋರ್ವೆಲ್ ಗಳನ್ನು ಕೊರೆಸಿ ಸಾಲಗಾರರಾಗುತ್ತಿದ್ದಾರೆ, ಒಂದುವರೆ ಸಾವಿರ ಅಡಿಗಳಷ್ಟು ಅಂತರ್ಜಲ ಕುಸಿದು ಹೋಗಿದೆ, ರೈತರ ಬದುಕನ್ನು ಕಂಡರೆ ನೋವಾಗುತ್ತದೆ, ರೈತರಿಗಾಗಿ ಮಾಡಿದ ಯೋಜನೆ ಪೂರ್ಣಗೊಳ್ಳದೆ ಇರುವುದನ್ನು ಕಂಡು ತಾಲೂಕಿನ ಜನರು ನನ್ನನ್ನು ಸೋಲಿಸಿದರು ಪರವಾಗಿಲ್ಲಾ,ನಾನೇ ಯೋಜನೆಯನ್ನು ಪೂರ್ಣಗೊಳಿಸುತ್ತೇನೆ, ಸರ್ಕಾರದ ಮಟ್ಟದಲ್ಲಿ ಈ ಯೋಜನೆಗೆ ಬೇಕಾದ ಸೌಲಭ್ಯವನ್ನು ಕೊಡಿಸಲು ಮುಖ್ಯಮಂತ್ರಿಗಳು ಹಾಗೂ ಉಪಮುಖ್ಯಮಂತ್ರಿಗಳ ಬಳಿ ರೈತರೊಂದಿಗೆ ನಿಯೋಗವನ್ನು ಶೀಘ್ರದಲ್ಲಿಯೇ ಹೋಗಲಾಗುತ್ತದೆ. ಈ ಯೋಜನೆಯ ಬಗ್ಗೆ ಉದಾಸಿನ ಮಾಡಿದರೆ ಇನ್ನು ಹಲವಾರು ವರ್ಷಗಳು ಕಳೆದರೂ ಕೆರೆಗಳು ತುಂಬುವುದಿಲ್ಲ, ರೈತರ ಬದುಕು ಅತಂತ್ರವಾಗುತ್ತದೆ, 15– 20 ವರ್ಷ ಅಧಿಕಾರ ಮಾಡಿರುವ ಇಲ್ಲಿನ ಜನ ಪ್ರತಿನಿಧಿಗಳು, ಹೇಳಿಕೊಳ್ಳುವಂತಹ ಒಂದು ಯೋಜನೆಯನ್ನಾದರೂ ಜಾರಿಗೊಳಿಸಿದ್ದಾರೆ. ಮನೋರಂಜನೆಗಳಿಂದ, ಜನರನ್ನು ಬೆದರಿಸುವುದರಿಂದ ಬಡವರ ನೊಂದವರ ಹೊಟ್ಟೆ ತುಂಬುವುದಿಲ್ಲ ಜನಪರ ಕೆಲಸವನ್ನು ಅಧಿಕಾರಕ್ಕೆ ಬಂದವರು ಮಾಡಬೇಕು ಎಂದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಸಿಡಿ ಚಂದ್ರಶೇಖರ್, ಪಿಟಿ ಚಿಕ್ಕಣ್ಣ, ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯ ಪಂಚಾಕ್ಷರಿ, ಮಾಜಿ ತಾಲೂಕು ಪಂಚಾಯಿತಿ ಅಧ್ಯಕ್ಷ ಎಂಎಂ ಜಗದೀಶ್, ನೀರಾವರಿ ಹೋರಾಟಗಾರ ಶರತ್ ಅಜ್ಜೇನಳ್ಳಿ, ಕೆಜಿ ಕೃಷ್ಣೇಗೌಡ ಸೇರಿದಂತೆ ನೂರಾರು ಕಾರ್ಯಕರ್ತರು ರೈತರು ಉಪಸಿತರಿದ್ದರು

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

# ಬಜೆಟ್ ಬೆನ್ನಲ್ಲೇ ಅಧಿಕಾರ ಹಂಚಿಕೆ ಬಗ್ಗೆ
## ಸಿಎಂ ಸಿದ್ದರಾಮಯ್ಯ ಶಾಕಿಂಗ್ ಮಾತು

ಬಜೆಟ್ ಮಂಡನೆ ಬೆನ್ನಲ್ಲೇ ಕರ್ನಾಟಕ ಕಾಂಗ್ರೆಸ್ ನಲ್ಲಿ ಅಧಿಕಾರ ಹಂಚಿಕೆ ಚರ್ಚೆ ಮತ್ತೆ ಮುನ್ನೆಲೆಗೆ ಬರಲಿದೆಯಾ? ಸಿಎಂ ಸಿದ್ದರಾಮಯ್ಯ ನೀಡಿರುವ ಶಾಕಿಂಗ್ ಹೇಳಿಕೆ ಹೀಗೊಂದು ಪ್ರಶ್ನೆ ಹುಟ್ಟಿಕೊಳ್ಳಲು ಕಾರಣವಾಗಿದೆ. ಸಿದ್ದರಾಮಯ್ಯ ದಾಖಲೆಯ 17ನೇ ಬಜೆಟ್ ಅನ್ನು ಮಾರ್ಚ್ 7 ರಂದು ಮಂಡಿಸಿದ್ದಾರೆ. ಬಳಿಕ ಮಾರ್ಚ್ 7 ರಂದು ಮೈಸೂರಿಗೆ ಭೇಟಿ ನೀಡಿದ್ದು, ಇದೇ ವೇಳೆ ಪತ್ರಕರ್ತರು ಅವರ ಬಳಿ, 'ಇನ್ನೆರಡು ಬಜೆಟ್ ಅನ್ನೂ ನೀವೇ ಮಂಡಿಸಲಿದ್ದೀರಾ' ಎಂದು ಪ್ರಶ್ನಿಸಿದ್ದಾರೆ. ಇದಕ್ಕುತ್ತರಿಸಿದ ಸಿದ್ದರಾಮಯ್ಯ, ಅದು ಹೈಕಮಾಂಡ್‌ನ ಅನುಮತಿಯ ಮೇಲೆ ಅವಲಂಬಿತವಾಗಿರುತ್ತದೆ ಎಂದು ಸ್ಪಷ್ಟಪಡಿಸಿದ್ದಾರೆ. ಹೈಕಮಾಂಡ್ ಏನು ತೀರ್ಮಾನ ಮಾಡಿದರೂ ಅದಕ್ಕೆ ತಾನು ಬದ್ಧನಾಗಿರುವುದಾಗಿ ಸಿದ್ರಾಮಯ್ಯ ಹೇಳಿದ್ದಾರೆ. ಹೈಕಮಾಂಡ್ ಬಿಟ್ಟುಬಿಡು ಎಂದರೆ ಬಿಡುತ್ತೀನಿ ಎಂದೂ ಹೇಳಿದ್ದಾರೆ. ಈ ಮೂಲಕ ಸಿದ್ದರಾಮಯ್ಯ ಅಧಿಕಾರ ಬಿಟ್ಟುಕೊಡುವ ಮಾತುಗಳನ್ನಾಡಿದರಾ ಎಂಬ ಪ್ರಶ್ನೆ ಮೂಡಿದೆ.




# ಸಮಗ್ರ ಬಜೆಟ್ : ಗೃಹ ಸಚಿವ ಪರಮೇಶ್ವರ



ಬೆಂಗಳೂರು, 2026–27ನೇ ಬಜೆಟ್ ವಿವಿಧ ಇಲಾಖೆಗಳಲ್ಲಿನ 56 ಸಾವಿರ ಹುದ್ದೆಗಳ ನೇಮಕಾತಿ ಸೇರಿದಂತೆ ಎಲ್ಲ ಕ್ಷೇತ್ರಗಳನ್ನು ಒಳಗೊಂಡ ಸಮಗ್ರ ಬಜೆಟ್ ಆಗಿದೆ ಎಂದು ಗೃಹ ಸಚಿವ ಜಿ.ಪರಮೇಶ್ವರ ಅವರು ಹೇಳಿದರು.

ವಿಧಾನಸೌಧದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿಶೇಷವಾಗಿ ವಿವಿಧ ಹುದ್ದೆಗಳ ನೇಮಕಾತಿ ಬಗ್ಗೆ ಯುವಕರಿಗೆ ಆತಂಕವಿತ್ತು. 56 ಸಾವಿರ ಹುದ್ದೆಗಳನ್ನು ಭರ್ತಿ ಮಾಡುವ ತಿರ್ಮಾನ ಮಾಡಿದ್ದಾರೆ. ರೈತ ಸಮುದಾಯಕ್ಕೆ 30 ಸಾವಿರ ಕೋಟಿ ರೂ. ಸಾಲ ನೀಡುವ ತೀರ್ಮಾನ ಮಾಡಿದ್ದಾರೆ. ಶಿಕ್ಷಣ ಇಲಾಖೆಯಲ್ಲಿ 15000 ಹುದ್ದೆ, ಪೊಲೀಸ್ ಇಲಾಖೆಯಲ್ಲಿ 8 ಸಾವಿರ ಹುದ್ದೆಗಳು ಹಾಗೂ ಆರೋಗ್ಯ ಇಲಾಖೆಯಲ್ಲಿ 2500 ಹುದ್ದೆಗಳ ನೇಮಕಾತಿ ಬಗ್ಗೆ ಬಜೆಟ್‌ನಲ್ಲಿ ಘೋಷಣೆ ಮಾಡಿದ್ದಾರೆ. ಪಂಚ ಗ್ಯಾರಂಟಿ ಯೋಜನೆಗಳನ್ನು ಮುಂದುವರಿಸಲಾಗುವುದು ಎಂಬುದನ್ನು ಬಜೆಟ್‌ನಲ್ಲಿ ತಿಳಿಸಿದ್ದಾರೆ.

16 ವರ್ಷದೊಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣ ನಿಷೇಧಿಸಿರುವುದು ಒಳ್ಳೆಯ ತೀರ್ಮಾನ. ತಂತ್ರಜ್ಞಾನ ಬಳಸಿ ರಾಜ್ಯಕ್ಕೆ ಸೀಮಿತವಾಗಿ 16 ವರ್ಷದೊಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣ ನಿಷೇಧ ಮಾಡಬಹುದು ಎಂದು ಹೇಳಿದರು.

ಸಾಲದ ಬಜೆಟ್ ಎಂದು ಪ್ರತಿಭಟಿಸಿರುವ ಬಿಜೆಪಿಯ ನಡೆಯ ಕುರಿತು ಪ್ರತಿಕ್ರಿಯಿಸಿದ ಅವರು, ನಮ್ಮ ಸರ್ಕಾರ ಆರ್ಥಿಕ ಶಿಸ್ತನ್ನು ಕಾಪಾಡಿಕೊಂಡಿದೆ. ನಿಯಮದಂತೆ ಸಾಲ ಶೇ. 25ರೊಳಗಿದ್ದೇವೆ. ಕೇಂದ್ರ ಸರ್ಕಾರ ಇದನ್ನು ಮೀರಿದೆ. ಈ ವಿಚಾರದಲ್ಲಿ, ರಾಜ್ಯದ ಆರ್ಥಿಕ ಶಿಸ್ತನ್ನು ಕಾಪಾಡಿರುವ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ರವರಿಗೆ ಅಭಿನಂದನೆಗಳನ್ನು ತಿಳಿಸುತ್ತೇನೆ ಎಂದರು.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

# ಕ್ರೀಡೆ ಎಲ್ಲರನ್ನು ಒಂದುಗೂಡಿಸಿ, ಪರಸ್ಪರ ಪ್ರೀತಿ, ಸ್ನೇಹ, ಸೌಹಾರ್ದತೆಯನ್ನು ಮೂಡಿಸಲಿ



ತುಮಕೂರು: ಟೀಮ್ ಸ್ಯಾಷೋಲಿಕ್ಸ್ ಮತ್ತು ವಿನಟೇಜ್ಇವೆಂಟ್ಸ್ ವತಿಯಿಂದ ಮಾರ್ಚ್ 22 ರಂದು ತುಮಕೂರಿನ ಸಿದ್ದಗಂಗಾ ಬಡಾವಣೆಯಲ್ಲಿರುವ ತುಮಕೂರು ಬ್ಯಾಡ್ಮಿಟನ್ಅಕಾಡೆಮಿಯ ಬ್ಯಾಡ್ಮಿಟನ್ಅಂಕಣದಲ್ಲಿ ನಡೆಯುವ ತುಮಕೂರು ಬ್ಯಾಡ್ಮಿಟನ್ ಲೀಗ್–2026ರ ಟ್ರೋಫಿ ಆನಾವರಣ ಹಾಗೂ ಆಟಗಾರರ ಹರಾಜು ಪ್ರಕ್ರಿಯೆಗೆ ಚಾಲನೆ ನೀಡಲಾಯಿತು.

ನಗರದ ಹರ್ಬನ್‌ರೆಸಾರ್ಟ್ ನಲ್ಲಿಟೀಮ್ ಸ್ಯಾಷೋಲಿಕ್ಸ್ಮತ್ತು ವಿನಟೇಜ್ಇವೆಂಟ್ಸ್‌ವತಿಯಿಂದ ಆಯೋಜಿಸಿದ್ದ ತುಮಕೂರು ಬ್ಯಾಡ್ಮಿಟನ್ ಲೀಗ್–2026 ರಟ್ರೋಫಿಆನಾವರಣ ಮತ್ತುಆಟಗಾರರ ಹರಾಜು ಪ್ರಕ್ರಿಯೆಗೆತುಮಕೂರು ಪೊಲೀಸ್‌ಇಲಾಖೆಯ ಸಶಸ್ತ್ರ ಮೀಸಲು ಪಡೆಯ ಡಿವೈಎಸ್ಪಿ ಕೆ.ಎಲ್.ಪರಮೇಶ್, ವಿದ್ಯಾವಾಹಿನಿ ಕಾರ್ಯದರ್ಶಿ ಪ್ರದೀಪಕುಮಾರ್ ಹಾಗೂ ಸರಕಾರಿ ನೌಕರರ ಸಂಘದರಾಜ್ಯಕ್ರೀಡಾ ಕಾರ್ಯದರ್ಶಿ ಮೋಹನ್‌ಕುಮಾರ್ ಅವರುಗಳು ದೀಪ ಬೆಳಗಿಸಿ, ಟ್ರೋಫಿ ಆನಾವರಣಗೊಳಿಸಿ ಚಾಲನೆ ನೀಡಿದರು.

ಟ್ರೋಫಿ ಆನಾವರಣಗೊಳಿಸಿ ಮಾತನಾಡಿದಡಿ.ಆರ್.ಡಿವೈಎಸ್ಪಿ ಕೆ.ಎಲ್.ಪರಮೇಶ್,ಒಬ್ಬ ಬ್ಯಾಡ್ಮಿಟನ್‌ಕ್ರೀಡಾಪಟುವಾಗಿ ನನಗೆ ಎಲ್ಲಿಲ್ಲದ ಸಂತಸಉಂಟು ಮಾಡಿದೆ. ಕ್ರಿಕೆಟ್‌ನಅಬ್ಬರದ ನಡುವೆ ಮರೆಯಾಗುತ್ತಿದ್ದಒಂದೊಂದೆ ಕ್ರೀಡೆಗಳು ಈಗ ಪ್ರವರ್ಧಮಾನಕ್ಕೆ ಬರುತ್ತಿರುವ ಸಂಕೇತಇದಾಗಿದೆ.ಬೆಂಗಳೂರಿಗೆ ಕೇವಲ 70 ಕಿ.ಮಿ.ದೂರದಲ್ಲಿರುವತುಮಕೂರು ಸಹ ಬೆಂಗಳೂರಿನಂತೆಯೇ ಎಲ್ಲಾರೀತಿಯಲ್ಲಿಯೇ ಬೆಳವಣಿಗೆ ಹೊಂದುತ್ತಿದೆ. ಇದರ ಭಾಗವೇ ಇಂದಿನ ಬ್ಯಾಡ್ಮಿಟನ್‌ಲೀಗ್‌ನ ಚಟುವಟಿಕೆಗಳು, ಸೋಮೇಶ್, ರೆಡ್ಡಿ, ಸ್ವಾಮಿ, ಲಿಖಿತ್, ಗೌತಮ್‌ರಂತಹ ನುರಿತ ಕ್ರೀಡಾಪುಟಗಳು ಸೇರಿ, ತಮ್ಮ ಬಹುದಿನದಕನಸನ್ನು ನನಸು ಮಾಡಿಕೊಂಡಿದ್ದಾರೆ. ಈ ಲೀಗ್ ಪ್ರತಿವರ್ಷ ನಡೆದು, ದೊಡ್ಡಯಶಸ್ಸು ಪಡೆಯಲಿ ಎಂದು ಶುಭ ಹಾರೈಸಿದರು.

ವಿದ್ಯಾವಾಹಿನಿ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಪ್ರದೀಪಕುಮಾರ್ ಮಾತನಾಡಿ, ಸುಮಾರು 144 ಜನ ಪ್ರೊಪೇಷನಲ್ ಆಟಗಾರರನ್ನು ಹೊಂದಿರುವಟೀಮ್ ಸ್ಯಾಷೋಲಿಕ್ಸ್ ನವರು ಇಂತಹದೊಂದು ಕ್ರೀಡಾ ಚಟುವಟಿಕೆಗೆ ಚಾಲನೆ ನೀಡಿರುವುದು ಹೆಮ್ಮೆಯ ವಿಚಾರ. ನಾನು ವಿದ್ಯಾರ್ಥಿಯಾಗಿದ್ದಾಗ ಹವ್ಯಾಸಿಯಾಗಿ ಷಟಲ್ ಬ್ಯಾಡ್ಮಿಟನ್‌ಆಟವಾಡುತ್ತಿದ್ದೆ.ಮೊದಲನೇ ಲೀಗ್‌ಚಾಂಪಿಯನ್ಸ್‌ನಲ್ಲಿ ಪುರುಷರಿಗೆ ಮಾತ್ರಅವಕಾಶವಿದೆ. ಮುಂದಿನ ದಿನಗಳಲ್ಲಿ ಮಹಿಳೆಯರಿಗೂ ಅವಕಾಶ ದೊರೆಯಲಿ. ಆ ಮೂಲಕ ಕ್ರೀಡೆಎಲ್ಲರನ್ನು ಒಂದುಗೂಡಿಸಿ, ಪರಸ್ಪರ ಪ್ರೀತಿ, ಸ್ನೇಹ, ಸೌಹಾರ್ದತೆಯನ್ನು ಮೂಡಿಸಲಿ ಎಂದರು.

ತುಮಕೂರು ಬ್ಯಾಡ್ಮಿಟನ್ ಲೀಗ್–2026 ಕುರಿತು ಪ್ರಾಸ್ತಾವಿಕ ನುಡಿಗಳನ್ನಾಡಿದ ಕ್ರೀಡಾಪಟುಜ್ಯೋತಿ ಪ್ರಕಾಶ್(ಜೆಪಿ), ಇದೊಂದು ವಿನೂತನ ಪ್ರಯತ್ನವಾಗಿದೆ.ಮೆಟ್ರೋಪಾಲಿಟನ್ ಸಿಟಿಗಳಿಗೆ ಸೀಮಿತವಾಗಿದ್ದ ಇಂತಹ ಕ್ರೀಡೆಗಳು ಇಂದುಎರಡನೇದರ್ಜೆಯ ನಗರಗಳತ್ತಲೂ ಹೆಜ್ಜೆಇಡುತ್ತಿರುವುದು ಒಳ್ಳೆಯ ಬೆಳವಣಿಗೆಯಾಗಿದೆ.ತುಮಕೂರು ಜಿಲ್ಲೆಕಬ್ಬಡಿ, ಖೋ–ಖೋ, ಪುಟ್‌ಬಾಲ್ ಕ್ರೀಡೆಗಳಿಗೆ ಹೆಸರುವಾಸಿ.ಹಿರಿಯ ಆಟಗಾರರ ಪರಿಶ್ರಮದಿಂದ ಬ್ಯಾಡ್ಮಿಟನ್‌ಕೂಡ ಆ ಸಾಲಿಗೆ ಸೇರಲಿದೆ. ಇದಕ್ಕಾಗಿಎಲ್ಲಾಆಟಗಾರರಿಗೆಅಭಿನಂದನೆ ಸಲ್ಲಿಸುವುದಾಗಿ ತಿಳಿಸಿದರು.

ಮಾರ್ಚ್22 ರಿಂದಆರಂಭವಾಗುವತುಮಕೂರು ಬ್ಯಾಡ್ಮಿಟನ್ ಲೀಗ್–2026 ಕ್ರೀಡಾಕೂಟದಲ್ಲಿಕುಣಿಗಲ್ ಪ್ಯಾಂಥರ್ಸ್, ಜಿ.ಆರ್. ಚಾಲೆಂಜರ್ಸ್, ಉಲ್ಫ್ ಫ್ಯಾಕ್ಸ್, ಥಂಡರ್ ಸ್ಯಾಷರ್, ತುಮಕೂರು ಪವರ್ ಸ್ಯಾಷರ್, ಷಟಲ್ ಸ್ಟ್ರೈಕರ್ಸ್,ಗುಬ್ಬಿ ವಾರಿಯರ್ಸ್, ಎಸ್.ಎಸ್.ಸ್ಟ್ರೈಕರ್ಸ್ ಸಜಿಲ್ಲೆಯ 8 ಕ್ರೀಡಾ ತಂಡಗಳು ಭಾಗವಹಿಸಲಿದ್ದು,ಮೊದಲ ಸ್ಥಾನ ಪಡೆದತಂಡದ ಮಾಲೀಕರಿಗೆ 70ಸಾವಿರ ನಗದು ಮತ್ತುಟ್ರೋಫಿ, ಎರಡನೇ ಸ್ಥಾನ ಪಡೆದತಂಡಕ್ಕೆ 50 ಸಾವಿರ ನಗದು ಬಹುಮಾನ ಮತ್ತುಟ್ರೋಫಿ, ಮೂರನೇ ಸ್ಥಾನ ಪಡೆದತಂಡಕ್ಕೆ 30 ಸಾವಿರ ಮತ್ತುಟ್ರೋಫಿದೊರೆಯಲಿದೆ.ಅಲ್ಲದೆಆಟಗಾರರಿಗೆ ವಯುಕ್ತಿಕವಾಗಿ ಮೊದಲು ಮೂರು ಸ್ಥಾನ ಪಡೆಯುವಆಟಗಾರರಿಗೆಕ್ರಮವಾಗಿ 3 ಸಾವಿರ, ಎರಡು ಸಾವಿರ ಮತ್ತುಒಂದು ಸಾವಿರ ನಗದು ಬಹುಮಾನ ನೀಡಲಾಗುವುದು.

ಕಾರ್ಯಕ್ರಮದಲ್ಲಿಟೀಮ್ ಸ್ಯಾಷೋಲಿಕ್ಸ್ ಮತ್ತು ವಿನ್‌ಟೇಜ್ಇವೆಂಟ್ಸ್‌ನ ಸೋಮೇಶ್, ಸ್ವಾಮಿ, ಲಿಖಿತ್, ರೆಡ್ಡಿ, ಗೌತಮ್, ಜ್ಯೋತಿಪ್ರಕಾಶ್(ಜೆಪಿ) ಅವರುಗಳು ಉಪಸ್ಥಿತರಿದ್ದರು.

## ಲಿಡ್ಕರ್ ನಿಗಮದಿಂದ ರಿಯಾಯತಿ ಮಾರಾಟ

ತುಮಕೂರು: ಡಾ: ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ವತಿಯಿಂದ ತುಮಕೂರು ಮಾರಾಟ ಮಳಿಗೆಯಲ್ಲಿ ಯುಗಾದಿ ಹಬ್ಬ, ರಂಜಾನ್ ಹಬ್ಬ ಹಾಗೂ ವರ್ಷಾಂತ್ಯದ ತೀರುವಳಿಯ ಪ್ರಯುಕ್ತ ಮಾರ್ಚ್ 6 ರಿಂದ 25ರವರೆಗೆ ವಿವಿಧ ದಾಸ್ತಾನುಗಳನ್ನು ರಿಯಾಯತಿ ದರದಲ್ಲಿ ಮಾರಾಟ ಮಾಡಲಾಗುವುದು. ಚರ್ಮದ ಶೂ, ಚಪ್ಪಲಿ, ಚರ್ಮದ ವ್ಯಾನಿಟಿ ಬ್ಯಾಗ್, ಪರ್ಸ್, ಲೆದರ್ ಬೆಲ್ಟ್ ಮತ್ತು ಇತರೇ ದಾಸ್ತಾನುಗಳ ಮೇಲೆ ಶೇ.20ರ ರಿಯಾಯಿತಿಯಂತೆ ಮಾರಾಟ ಮಾಡಲಾಗುವುದು.

ಸಾರ್ವಜನಿಕರು ಹೆಚ್ಚಿನ ರೀತಿಯಲ್ಲಿ ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ತುಮಕೂರು ಮಾರಾಟ ಮಳಿಗೆಯ ಮತ್ತು ನಿಗಮದ ವ್ಯವಸ್ಥಾಪಕ ಮಂಜುನಾಥ್ ತಿಳಿಸಿದ್ದಾರೆ.

## ಮಾ.18 ರಿಂದ ಏ.2ರವರೆಗೆ ಎಸ್.ಎಸ್.ಎಲ್.ಸಿ. ಪರೀಕ್ಷೆ–1 : ನಿಷೇಧಾಜ್ಞೆ ಜಾರಿ

ತುಮಕೂರು: ತುಮಕೂರು ಜಿಲ್ಲೆಯಾದ್ಯಂತ 131 ಪರೀಕ್ಷಾ ಕೇಂದ್ರಗಳಲ್ಲಿ ಮಾರ್ಚ್ 18 ರಿಂದ ಏಪ್ರಿಲ್ 2ರವರೆಗೆ ಎಸ್.ಎಸ್.ಎಲ್.ಸಿ. ಪರೀಕ್ಷೆ–1 ನಡೆಯಲಿದ್ದು, ಪರೀಕ್ಷೆಯನ್ನು ಯಾವುದೇ ಲೋಪದೋಷವಿಲ್ಲದಂತೆ ಹಾಗೂ ಯಾವುದೇ ಅಹಿತಕರ ಘಟನೆ ಸಂಭವಿಸದಂತೆ ನಡೆಸಲು ಪರೀಕ್ಷಾ ಕೇಂದ್ರಗಳ ಸುತ್ತಮುತ್ತ 200 ಮೀ. ವ್ಯಾಪ್ತಿಯೊಳಗಿನ ಪ್ರದೇಶವನ್ನು ನಿಷೇಧಿತ ಪ್ರದೇಶವೆಂದು ಘೋಷಿಸಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ಶುಭ ಕಲ್ಯಾಣ್ ಅವರು ಆದೇಶ ಹೊರಡಿಸಿದ್ದಾರೆ.

ನಿಷೇಧಾಜ್ಞೆಯು ಮಾರ್ಚ್ 18 ರಿಂದ ಏಪ್ರಿಲ್ 2ರವರೆಗೆ(ಸರ್ಕಾರಿ ರಜೆ ಮತ್ತು ಪರೀಕ್ಷೆ ನಡೆಯದೆ ಇರುವ ದಿನಗಳನ್ನು ಹೊರತುಪಡಿಸಿ) ಬೆಳಿಗ್ಗೆ 9 ರಿಂದ ಸಂಜೆ 6 ಗಂಟೆಯವರೆಗೆ ಜಾರಿಯಲ್ಲಿರುತ್ತದೆ. ಈ ನಿಷೇಧಾಜ್ಞೆಯನ್ವಯ ಪರೀಕ್ಷೆ ನಡೆಯುವ ದಿನಾಂಕದಂದು ಪರೀಕ್ಷಾ ಕೇಂದ್ರಗಳ ಸುತ್ತಮುತ್ತ ಇರುವ ಝೆರಾಕ್ಸ್ ಮತ್ತು ಕಂಪ್ಯೂಟರ್/ಸೈಬರ್, ಬೆರಳಚ್ಚು ಅಂಗಡಿಗಳನ್ನು ಮುಚ್ಚತಕ್ಕದ್ದು. ನಿಷೇಧಾಜ್ಞೆ ಜಾರಿಯಲ್ಲಿರುವ ಅವಧಿಯಲ್ಲಿ ಅನಧಿಕೃತ ವ್ಯಕ್ತಿಗಳು ಯಾರೂ ನಿರ್ಬಂಧಿತ ಪ್ರದೇಶದೊಳಗೆ ಪ್ರವೇಶಿಸುವಂತಿಲ್ಲ ಹಾಗೂ ನಿಷೇಧಾಜ್ಞೆಯನ್ನು ಉಲ್ಲಂಘನೆ ಮಾಡಿದ ವ್ಯಕ್ತಿಗಳನ್ನು ಬಂಧಿಸಿ ಅವರ ವಿರುದ್ಧ ಕಾನೂನು ಕ್ರಮ ಜರುಗಿಸಲು ಜಿಲ್ಲಾ ಪೊಲೀಸ್ ಇಲಾಖೆಗೆ ಆದೇಶಿಸಲಾಗಿದೆ.

ಕೆಲವು ಪ್ರಕರಣಗಳಲ್ಲಿ ದುರುದ್ದೇಶದಿಂದ ನಕಲಿ ಪ್ರಶ್ನೆಪತ್ರಿಕೆಗಳ ಫೋಟೋಗಳನ್ನು ತೆಗೆದು ವಾಟ್ಸ್‌ಆಪ್ ಇತರೆ ಸಾಮಾಜಿಕ ಜಾಲತಾಣಗಳ ಮೂಲಕ ಕಳುಹಿಸಿ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಲ್ಲಿ ಗೊಂದಲ ಸೃಷ್ಟಿ ಮಾಡುವವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಲಾಗುವುದು. ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರಿಗೆ ಬೇಸಿಕ್ ಮೊಬೈಲ್ ಇರಿಸಿಕೊಳ್ಳಲು ಅವಕಾಶ ನೀಡಲಾಗಿದೆ. ಉಳಿದ ಎಲ್ಲಾ ಪರೀಕ್ಷಾ ಸಿಬ್ಬಂದಿ/ವಿದ್ಯಾರ್ಥಿಗಳು ಮೊಬೈಲ್ ತರುವುದು/ಉಪಯೋಗಿಸುವುದನ್ನು ಕಡ್ಡಾಯವಾಗಿ ನಿಷೇಧಿಸಿದೆ.

ಜಿಲ್ಲೆಯಲ್ಲಿ ಪ್ರಶ್ನೆ ಪತ್ರಿಕೆಗಳ ಸೋರಿಕೆ ಮತ್ತು ಪರೀಕ್ಷಾ ಅಕ್ರಮಗಳಿಗೆ ಉತ್ತೇಜನ ನೀಡುವಂತಹ ವ್ಯಕ್ತಿಗಳು ಕಂಡುಬಂದಲ್ಲಿ ಅವರ ವಿರುದ್ಧ ಭಾರತೀಯ ನ್ಯಾಯ ಸಂಹಿತೆ 2023ರಡಿ ಅಗತ್ಯ ಮುಂಜಾಗ್ರತಾ ಕ್ರಮ ಕ್ರಮಕೈಗೊಳ್ಳಲಾಗುವುದು ಎಂದು ಅವರು ಸೂಚಿಸಿದ್ದಾರೆ.

# ಮಹಿಳಾ ಸ್ವಸಹಾಯ ಸಂಘಗಳ ಉತ್ಪನ್ನ–ವಸ್ತು ಪ್ರದರ್ಶನ



ತುಮಕೂರು: ವಿಶ್ವ ಮಹಿಳಾ ದಿನಾಚರಣೆ ಹಾಗೂ ಯುಗಾದಿ ಪ್ರಯುಕ್ತ ಮಿಲನ್ ಸಂಸ್ಥೆ ನಗರದ ಅಮಾನಿಕೆರೆಯ ಗಾಜಿನ ಮನೆಯಲ್ಲಿ ಮಹಿಳಾ ಸ್ವಸಹಾಯ ಸಂಘಗಳು ಉತ್ಪಾದಿಸಿದ ವಸ್ತುಗಳ ಪ್ರದರ್ಶನ ಹಾಗೂ ಮಾರಾಟದ ಎರಡು ದಿನಗಳ ವಸ್ತುಪ್ರದರ್ಶನ ಶನಿವಾರ ಆರಂಭವಾಯಿತು.

ವಿವಿಧ ಮಹಿಳಾ ಸ್ವಸಹಾಯ ಸಂಘಗಳು ತಯಾರಿಸಿರುವ ಗೃಹೋಪಯೋಗಿ ವಸ್ತುಗಳು, ಅಡುಗೆ ಸಾಮಾಗ್ರಿ, ಅಲಂಕಾರಿಕ ಪದಾರ್ಥಗಳು, ಸೀರೆ ಸೇರಿದಂತೆ ಮಕ್ಕಳ ಮತ್ತು ಮಹಿಳೆಯರ ಉಡುಪುಗಳು ವಸ್ತು ಪ್ರದರ್ಶನದ ಆಕರ್ಷಣೆಯಾಗಿವೆ. ರಿಯಾಯಿತಿ ದರದ ಮಾರಾಟ ವ್ಯವಸ್ಥೆ ಮಾಡಲಾಗಿದೆ.

ಮಿಲನ್ ಸಂಸ್ಥೆ ಮುಖ್ಯಸ್ಥೆ ಪೂಜಾ ಮಾತನಾಡಿ, ವಿಶ್ವ ಮಹಿಳಾ ದಿನಾಚರಣೆ ಸಂದರ್ಭದಲ್ಲಿ ಮಹಿಳಾ ಉದ್ಯಮಿಗಳನ್ನು ಪ್ರೋತ್ಸಾಹಿಸಲು, ಅವರ ಉತ್ಪನ್ನಗಳನ್ನು ಗ್ರಾಹಕರಿಗೆ ಪರಿಚಯಿಸಲು ಹಾಗೂ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಲು ಈ ವಸ್ತುಪ್ರದರ್ಶನ ಏರ್ಪಡಿಸಲಾಗಿದೆ ಎಂದು ಹೇಳಿದರು.

ಇದೊಂದು ಶುದ್ಧ ಮಹಿಳೆಯರನ್ನು ಆಕರ್ಷಿಸುವ ವಸ್ತುಪ್ರದರ್ಶನವಾಗಿದೆ. ಶನಿವಾರ ಮತ್ತು ಭಾನುವಾರ ಪ್ರದರ್ಶನ, ಮಾರಾಟ ಇರುತ್ತದೆ. ನಗರದ ವಿವಿಧ ಮಹಿಳಾ ಸಂಘಟನೆಗಳು ಈ ವಸ್ತುಪ್ರದರ್ಶನಕ್ಕೆ ಬೆಂಬಲ ನೀಡಿವೆ ಎಂದು ತಿಳಿಸಿದರು.

ವಸ್ತುಪ್ರದರ್ಶನ ಉದ್ಘಾಟನಾ ಸಮಾರಂಭದಲ್ಲಿ ಇನ್ನರ್ ವ್ಹೀಲ್ ಸಂಸ್ಥೆ ಅಧ್ಯಕ್ಷೆ ಮಂಜುಳಾ ಲೋಕೇಶ್, ಐಕ್ಯ ಫೌಂಡೇಶನ್ ಅಧ್ಯಕ್ಷೆ ರೇಖಾ ಕುಮಾರ್, ಇನ್ನರ್ ವ್ಹೀಲ್ ಸೆಂಟ್ರಲ್ ಅಧ್ಯಕ್ಷೆ ಟಿ.ಎಸ್.ಲಲಿತಾ ಮಹೇಶ್, ಸದಸ್ಯೆ ಲೀಲಾವತಿ ಅಶೋಕ್ ಮೊದಲಾದವರು ಅತಿಥಿಗಳಾಗಿ ಭಾಗವಹಿಸಿದ್ದರು.

# ರೈತ ವಿರೋಧಿ ಧೋರಣೆ ಖಂಡಿಸಿ ಬೃಹತ್ ಪ್ರತಿಭಟನೆ



ಕುಣಿಗಲ್ :ರೈತ ವಿರೋಧಿ ಧೋರಣೆಯನ್ನು ಖಂಡಿಸಿ ಸರ್ಕಾರದ ವಿರುದ್ಧ ಬೃಹತ್ ಪ್ರತಿಭಟನೆಯನ್ನು ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ಕರ್ನಾಟಕ ರಾಜ್ಯ ರೈತ ಸಂಘ ಹಸಿರು ಸೇನೆ ಮಾರ್ಚ್ 9 ರಂದು ಸೋಮವಾರ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರಾಜ್ಯ ಸಂಚಾಲಕರಾದ ಆನಂದ್ ಪಟೇಲ್ ಹುಲಿಕಟ್ಟೆ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡುತ್ತಾ ರೈತ ವಿರೋಧಿ ಧೋರಣೆಯನ್ನು ಖಂಡಿಸಿ ರಾಜ್ಯಸರ್ಕಾರದ ವಿರುದ್ಧ ಬೃಹತ್ ಪ್ರತಿಭಟನೆಯನ್ನು ತುಮಕೂರು ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ಹಮ್ಮಿಕೊಂಡಿದ್ದು ರೈತರು ಜಿಲ್ಲೆಯಲ್ಲಿ ನಾನಾ ಸಮಸ್ಯೆಗಳನ್ನು ಎದುರಿಸುತ್ತಿದ್ದು ರೈತರು ಕೆರೆಯ ಮಣ್ಣನ್ನು ತುಂಬಲು ಅವಕಾಶ ನೀಡದೆ ಖಾಸಗಿ ಕಾರ್ಖಾನೆಗಳಿಗೆ ಮಾರಾಟ ಮಾಡಲು ಹೊರಟಿದ್ದಾರೆ ರೈತರ ಜಮೀನುಗಳಿಂದ ಫಲವತ್ತಾದ ಮಣ್ಣು ಮಳೆ ಬಂದಾಗ ಕೊಚ್ಚಿಕೊಂಡು ಕೆರೆಕಟ್ಟೆ ಸೇರುತ್ತದೆ ಆ ಮಣ್ಣನು ಪುನಃ ರೈತರೇ ತಮ್ಮ ಜಮೀನುಗಳಿಗೆ ಹೊಡೆಯಲು ಅವಕಾಶ ಮಾಡಿಕೊಡಿ, ಅರಣ್ಯ ಇಲಾಖೆಯ ಪ್ರದೇಶದಲ್ಲಿ ರೈತರು ಸುಮಾರು 50,60 ವರ್ಷಗಳಿಂದಲೂ ಸಾಗುವಳಿ ಮಾಡಿ ಉಳುಮೆ ಮಾಡುತ್ತಿರುವ ಜಮೀನನ್ನ ಒಕ್ಕಲೆಬ್ಬರಿಸಿ ಶೋಷಣೆ ಮಾಡುತ್ತಿರುವುದನ್ನ ಕೂಡಲೇ ನಿಲ್ಲಿಸಬೇಕು,ವಿದ್ಯುತ್ ಪರಿವರ್ತಕಗಳ ಸಂಪರ್ಕ ಪಡೆಯಲು ರೈತರಿಗೆ ಸುಮಾರು 4 ಲಕ್ಷ ಹಣ ಖರ್ಚಾಗುತ್ತಿದ್ದು ಈ ಹಣವನ್ನ ಸರ್ಕಾರ ರೈತರಿಗೆ ಉಚಿತವಾಗಿ ಬರಿಸುವಂಥಾಗಬೇಕು, ಜೊತೆಗೆ ನಿರಂತರವಾಗಿ ದಿನನಿತ್ಯ 7 ಗಂಟೆ ವಿದ್ಯುತ್ ನೀಡುವಂತಹ ವ್ಯವಸ್ಥೆಯನ್ನು ಕೈಗೊಳ್ಳಬೇಕಾಗಿದೆ ಭದ್ರಾ ಮೇಲ್ದಂಡೆ,ಎತ್ತಿನಹೊಳೆ ಹೇಮಾವತಿ ನೀರಿನ ಯೋಜನೆಯನ್ನು ತ್ವರಿತವಾಗಿ ಪೂರ್ಣಗೊಳಿಸಿ ಕೆರೆ ಕಟ್ಟೆಗಳಿಗೆ ನೀರು ಒದಗಿಸಬೇಕೆಂದು ತಿಳಿಸುತ್ತಾ ರೈತರ ಕೃಷಿ ಜಮೀನನ್ನ ಯಾವುದೇ ಕಾರಣಕ್ಕೂ ಕೈಗಾರಿಕೆಗಳಿಗೆ ಕೊಡಬಾರದೆಂದು ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ಪ್ರತಿಭಟನೆ ನಡೆಸುವುದರೊಂದಿಗೆ ಟೌನ ಹಾಲ್ ವೃತ್ತದಿಂದ ಜಿಲ್ಲಾಧಿಕಾರಿಗಳ ಕಚೇರಿ ವರೆಗೂ ಬೃಹತ್ ಮೆರವಣಿಗೆಯನ್ನ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ತಾಲೂಕು ಹಸಿರು ಸೇನೆಯ ಅಧ್ಯಕ್ಷ ಅನಿಲ್ ಕುಮಾರ್ ಮಾತನಾಡಿ ಸಕಾಲದಲ್ಲಿ ರೈತರು ಹೆಚ್ಚಿನ ರೀತಿಯಲ್ಲಿ ರಾಗಿ ನೋಂದಾಣಿ ಮಾಡಿಕೊಳ್ಳಲು ಸಾಧ್ಯವಾಗದೇ ಇರುವುದರಿಂದ ಕೂಡಲೇ ನೋಂದಾಯಿಸಿಕೊಳ್ಳಲು ಇನ್ನು ಹೆಚ್ಚಿನ ಅವಕಾಶವನ್ನ ನೀಡುವಂತಾಗಬೇಕು ಎಂದು ಒತ್ತಾಯ ಪಡಿಸಿದರು.

ಈ ಸಂದರ್ಭದಲ್ಲಿ ಪ್ರಧಾನ ಕಾರ್ಯದರ್ಶಿ ವೆಂಕಟೇಶ್ ಗೌಡ, ರಂಗಸ್ವಾಮಿ, ಕುಮಾರ್ ಗೌಡ ಸೇರಿದಂತೆ ರೈತ ಮುಖಂಡರು ಉಪಸ್ಥಿತರಿದ್ದರು.



ತುಮಕೂರಿನ ಆರ್.ಟಿ. ನಗರದ ಹೋರಿ ಮುದ್ದಪ್ಪ ಬಡಾವಣೆಯ ಸಿದ್ಧಿಗಣಪತಿ ದೇವಸ್ಥಾನದಲ್ಲಿ ಶುಕ್ರವಾರ ಸಂಕಷ್ಟಹರ ಚತುರ್ಥಿ ಅಂಗವಾಗಿ ಗಣಪತಿಗೆ ಎಕ್ಕದ ಹೂವಿನ ಅಲಂಕಾರ ಮಾಡಲಾಗಿತ್ತು. ಅರ್ಚಕರಾದ ಮನೋಜ್ ಆರಾಧ್ಯ ಎಕ್ಕದ ಹೂವಿನ ಅಲಂಕಾರ ಮಾಡಿದ್ದರು. ಇದರ ಅಂಗವಾಗಿ ಭಕ್ತರಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.

## ನಗರ ಉಪವಿಭಾಗ–1 : ಇಂದು ವಿದ್ಯುತ್ ವ್ಯತ್ಯಯ

ತುಮಕೂರು: ಬೆಸ್ಕಾಂ ನಗರ ಉಪವಿಭಾಗ–1ರ ವ್ಯಾಪ್ತಿಯಲ್ಲಿ ದುರಸ್ತಿ ಕಾಮಗಾರಿ ಕೈಗೊಂಡಿರುವುದರಿಂದ ಮಾರ್ಚ್ 8ರಂದು ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ಪಿ.ಎನ್.ಆರ್. ಪಾಳ್ಯ, ಕುಪ್ಪೂರು, ಹೊಸಹಳ್ಳಿ, ಪುಟ್ಟಸ್ವಾಮ್ಯನಪಾಳ್ಯ, ಸಿರಾಗೇಟ್, ಹೊಂಬಯ್ಯನಪಾಳ್ಯ, ಬ್ಯಾಂಕ್ ಕಾಲೋನಿ, 80 ಫೀಟ್ ರಸ್ತೆ, ನಾಗಣ್ಣನಪಾಳ್ಯ, ಚಿಕ್ಕವೀರಯ್ಯನಪಾಳ್ಯ, ಟೂಡಾ ಲೇಔಟ್, ಎಸ್.ಎನ್.ಪಾಳ್ಯ, ಸಾಯಿನಗರ, ಹೊನ್ನೇನಹಳ್ಳಿ, ಸಿರಾಗೇಟ್ ಹೌಸಿಂಗ್ ಬೋರ್ಡ್, ಲಿಂಗಾಪುರ, ವಾಸವಿನಗರ, ಅರಳೀಮರದ ಪಾಳ್ಯ, ಶ್ರೀದೇವಿ ಕಾಲೇಜು, ಹೊಸಹಳ್ಳಿ, ಎ.ಎಂ. ಪಾಳ್ಯ, ಹೊನ್ನೇನಹಳ್ಳಿ, ಹೌಸಿಂಗ್ ಬೋರ್ಡ್, ಎಸ್.ಎನ್. ಪಾಳ್ಯ, ಇತರೆ ಪ್ರದೇಶಗಳಲ್ಲಿ ಮಧ್ಯಂತರ ವಿದ್ಯುತ್ ವ್ಯತ್ಯಯ ಉಂಟಾಗಲಿದ್ದು, ಗ್ರಾಹಕರು ಸಹಕರಿಸಬೇಕೆಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಮನವಿ ಮಾಡಿದ್ದಾರೆ.

## ಯುಗಾದಿ ಸಂಭ್ರಮ 2026 ಹಾಸ್ಯ ಮನರಂಜನೆ

ತುಮಕೂರು– ನಗರದ ಬಟವಾಡಿಯ ಎಪಿಎಂಸಿ ಯಾರ್ಡ್‌ನಲ್ಲಿರುವ ಹಾಸ್ಯಲೋಕದ 31ನೇ ವರ್ಷದ ವಾರ್ಷಿಕೋತ್ಸವ ಹಾಗೂ ಯುಗಾದಿ ಸಂಭ್ರಮ 2026 ಹಾಸ್ಯ ಮನರಂಜನಾ ಕಾರ್ಯಕ್ರಮ ಮಾ.8 ರಂದು ನಡೆಯಲಿದೆ.

ನಗರದ ಎಸ್‌ಐಟಿಯ ಆವರಣದಲ್ಲಿರುವ ಬಿರ್ಲಾ ಸಭಾಂಗಣದಲ್ಲಿ ನಾಳೆ ಸಂಜೆ 6ಕ್ಕೆ ಈ ಕಾರ್ಯಕ್ರಮ ನಡೆಯಲಿದೆ.

ನಗೆ ಸಂಭ್ರಮದಲ್ಲಿ ತೇಲಿಸುವ ಮಿಮಿಕ್ರಿ ಗೋಪಿಯವರಿಂದ ಮನರಂಜನಾ ಕಾರ್ಯಕ್ರಮ, ಹಾಸ್ಯ ಕಲಾವಿದರಾದ ಕೆ.ಎಚ್.ನರಸಿಂಹಮೂರ್ತಿ ರವರಿಂದ ಮನೋರಂಜನಾ ಕಾರ್ಯಕ್ರಮ, ಹಿನ್ನೆಲೆ ಗಾಯಕರಾದ ರುದ್ರಮೂರ್ತಿ ಎಲೆರಾಂಪುರ ಶಶಿಕಲಾ ಇವರಿಂದ ಹಾಸ್ಯಗೀತೆ, ಚಲನಚಿತ್ರ ಗೀತೆಗಳು ಮೂಡಿ ಬರಲಿವೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹಾಸ್ಯಲೋಕದ ಅಧ್ಯಕ್ಷರಾದ ಡಾ.ರಾಜಶೇಖರ್ ಕೆ.ಎಸ್. ವಹಿಸುವರು ಎಂದು ಹಾಸ್ಯಲೋಕದ ಕಾರ್ಯದರ್ಶಿ ಟಿ.ಹೆಚ್. ಪ್ರಸನ್ನಕುಮಾರ್ ತಿಳಿಸಿದ್ದಾರೆ.

EDITOR: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRINTED BY: T.S.KRISHNAMURTHY, ANJANADRI PRINTERS, 4th CROSS, VINAYAKA NAGARA, TUMAKURU-572101. KARNATAKA, PUBLISHED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. OWNED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRNTED AT: ANJANADRI PRINTERS, 4th CROSS, VINAYAKA NAGARA, TUMAKURU-572101. KARNATAKA, PUBLISHED AT: TUMAKURU, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA . SUB EDITOR- A.S.BANUPRAKASH CONTACT : 9901010109 GMAIL: suryapragathi2021@gmail.com.